# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೇಳನೆಯ ಅಧಿವೇಶನ

ಲಘು ಪ್ರಕಟಣೆ ಭಾಗ – 1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಸೋಮವಾರ, ದಿನಾಂಕ:08.12.2025

**(01)**

ದಿನಾಂಕ:08.12.2025 ರಂದು ಬೆಳಗ್ಗೆ 11.13 ಗಂಟೆಗೆ ಸದನವು ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**‘**ವಂದೇ ಮಾತರಂ’ ಗೀತೆಯೊಂದಿಗೆ ಗೌರವ ಸೂಚಿಸುವ ಮೂಲಕ ಸದನದ ಕಾರ್ಯಕಲಾಪಗಳು ವಿದ್ಯುಕ್ತವಾಗಿ ಆರಂಭಗೊಂಡಿತು.

## ಭಾರತದ ಸಂವಿಧಾನ

### ಪೀಠಿಕೆ

ಮಾನ್ಯ ಸಭಾಪತಿಯವರು ಎಲ್ಲಾ ಶಾಸಕರಿಗೂ ಸಂವಿಧಾನದ ಪೀಠಿಕೆಯನ್ನು ಬೋಧಿಸಿದರು.

## 1. ನೂತನ ಶಾಸಕರುಗಳ ಪರಿಚಯ

ವಿಧಾನ ಪರಿಷತ್ತಿಗೆ ನೂತನವಾಗಿ ನಾಮನಿರ್ದೇಶನ ಹೊಂದಿದ ಈ ಕೆಳಕಂಡ ಮಾನ್ಯ ಶಾಸಕರುಗಳನ್ನು ಮಾನ್ಯ ಸಭಾನಾಯಕರು ಪರಿಚಯಿಸಿದರು.

ಶ್ರೀಯುತರುಗಳಾದ:

1. ರಮೇಶ್ ಬಾಬು
2. ಡಾ: ಆರತಿ ಕೃಷ್ಣ
3. ಎಫ್.ಹೆಚ್. ಜಕ್ಕಪ್ಪನವರ್
4. ಶಿವಕುಮಾರ್ ಕೆ.

## 2. ಸಂತಾಪ ಸೂಚನೆಗಳು

ಕಳೆದ ಅಧಿವೇಶನದಿಂದೀಚೆಗೆ ನಿಧನ ಹೊಂದಿದ ಈ ಕೆಳಕಂಡ ಗಣ್ಯರುಗಳಿಗೆ ಮಾನ್ಯ ಸಭಾಪತಿಯವರು ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿದರು.

ಶ್ರೀಮತಿ/ಶ್ರೀಯುತರುಗಳಾದ:

01. ಕೆ. ನರಹರಿ, ವಿಧಾನ ಪರಿಷತ್ತಿನ ಮಾಜಿ ಶಾಸಕರು
02. ಆರ್.ವಿ. ದೇವರಾಜ್, ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಮಾಜಿ ಶಾಸಕರು
03. ಹುಲ್ಲಪ್ಪ ಯಮನಪ್ಪ ಮೇಟಿ, ಮಾಜಿ ಲೋಕಸಭಾ ಸದಸ್ಯರು, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಹಾಲಿ ಶಾಸಕರು
04. ಡಾ: ಎನ್.ಆರ್. ನಾಯಕ, ಜಾನಪದ ತಜ್ಞ ಹಾಗೂ ಸಾಹಿತಿ
05. ಎಸ್.ಎಲ್. ಭೈರಪ್ಪ, ಕಾದಂಬರಿಕಾರರು
06. ಟಿ.ಜೆ.ಎಸ್. ಜಾರ್ಜ್, ಹಿರಿಯ ಪತ್ರಕರ್ತ, ಲೇಖಕರು ಹಾಗೂ ಜನಪ್ರಿಯ ಅಂಕಣಕಾರರು
07. ಅನುರಾಧಾ ಧಾರೇಶ್ವರ, ಸುಗಮ ಸಂಗೀತ ಗಾಯಕಿ
08. ಸಾಲುಮರದ ತಿಮ್ಮಕ್ಕ, ಪರಿಸರ ಸಂರಕ್ಷಕಿ
09. ಧರ್ಮೇಂದ್ರ, ಹಿಂದಿ ಚಿತ್ರರಂಗದ ನಟ, ನಿರ್ಮಾಪಕ ಹಾಗೂ ಮಾಜಿ ಸಂಸದರು
10. ಮೈಸೂರು ಶ್ರೀಕಂಠಯ್ಯ ಉಮೇಶ್, ಕನ್ನಡ ವೃತ್ತಿ ರಂಗಭೂಮಿ ಮತ್ತು ಚಲನಚಿತ್ರ ರಂಗದ ಹಾಸ್ಯ ಕಲಾವಿದರು

ಮಾನ್ಯ ಸಭಾನಾಯಕರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರುಗಳು ಮಾನ್ಯ ಸಭಾಪತಿಯವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಮೃತ ಗಣ್ಯರುಗಳ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

## 3. ಪ್ರಶ್ನೋತ್ತರ

ದಿನಾಂಕ:08.12.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–Iರ 1ನೇ ಪಟ್ಟಿಯ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 1(14)
2. 2(157+53)
3. 3(105)
4. 4(159)
5. 5(60)
6. 6(01+101)

7. 7(148) ಕಾಲಾವಕಾಶ
8. 8(52)
9. 9(81)
10. 10(75)
11. 11(107)
12. 12(129+140)
13. 13(139)
14. 14(147)
15. 15(127)

ದಿನಾಂಕ:08.12.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–Iರ 1ನೇ ಪಟ್ಟಿಯ ಒಟ್ಟು 145 ಪ್ರಶ್ನೆಗಳ ಪೈಕಿ 68 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 4. ಅಭಿನಂದನೆ

1. ಮಾನ್ಯ ಶಾಸಕರಾದ ಶ್ರೀ ಡಿ.ಎಸ್. ಅರುಣ್ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆ.ಎಸ್.ಸಿ.ಎ)ಯ ಆಡಳಿತ ಮಂಡಳಿ ಸ್ಥಾನಗಳಿಗೆ ನಡೆದ ಚುನಾವಣೆಯ ಅಂತಿಮ ಫಲಿತಾಂಶದಲ್ಲಿ ವಿಧಾನ ಪರಿಷತ್ ಶಾಸಕರು ಮತ್ತು ರಾಜ್ಯ ಬಿಜೆಪಿ ಕಾರ್ಯದರ್ಶಿಗಳು ಶ್ರೀ ಡಿ.ಎಸ್. ಅರುಣ್ ಅವರು ನೂತನವಾಗಿ ಶಿವಮೊಗ್ಗ ವಲಯ ಸಂಚಾಲಕರಾಗಿ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ನಿರ್ದೇಶಕರಾಗಿ ಆಯ್ಕೆಯಾಗಿರುವುದಕ್ಕೆ ಸದನದ ಮೂಲಕ ಅಭಿನಂದನೆಯನ್ನು ಸಲ್ಲಿಸಲಾಯಿತು.

## 5. ಶೂನ್ಯವೇಳೆ ಪ್ರಸ್ತಾವಗಳು

**1.** **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ರಾಜ್ಯದಲ್ಲಿ ಇತ್ತೀಚೆಗೆ ಸರ್ಕಾರಿ ವಸತಿ ನಿಲಯಗಳಲ್ಲಿ ಬಾಲಕಿಯರು ಗರ್ಭಿಣಿಯರಾಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಉತ್ತರವನ್ನು ಒದಗಿಸುವುದಾಗಿ ತಿಳಿಸಿದರು.

**2.** **ಶ್ರೀ ಐವನ್ ಡಿ'ಸೋಜಾ** ಅವರು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಲಕ್ಷಾಂತರ ಬೀಡಿ ಕಾರ್ಮಿಕರಿಗೆ 2018 ರಿಂದ 2024ರವರೆಗೆ ಬಾಕಿಯಿರುವ ಕನಿಷ್ಠ ಕೂಲಿಯನ್ನು ಪಾವತಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಾರ್ಮಿಕ ಸಚಿವರು ಉತ್ತರಿಸಿದರು.

3. **ಶ್ರೀ ಪಿ.ಹೆಚ್. ಪೂಜಾರ್** ಅವರು ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರಿಗೆ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಕೇವಲ ಪಾಠ ಬೋಧನೆಗಳಿಗೆ ಸೀಮಿತಗೊಳಿಸಿ ಇತರೆ ಕೆಲಸಗಳಿಗೆ ನಿಯೋಜನೆ ಮಾಡದಂತೆ ಕ್ರಮಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಸಿ.ಟಿ. ರವಿ ಹಾಗೂ ಶ್ರೀ ಜಗದೇವ್ ಗುತ್ತೇದಾರ್** ಅವರುಗಳು ಅಂತರಾಷ್ಟ್ರೀಯ ಡ್ರಗ್ಸ್ ಮಾಫಿಯಾಗೆ ಬೃಹತ್ ಮಾರುಕಟ್ಟೆಯಾಗಿ ರೂಪುಗೊಳ್ಳುತ್ತಿದ್ದು, ಡ್ರಗ್ಸ್ ಜಾಲದಿಂದ ಯುವ ಜನತೆಯನ್ನು ರಕ್ಷಿಸಲು ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ರಾಜ್ಯ ಸರ್ಕಾರ 3 ವರ್ಷಗಳಿಂದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀಮತಿ ಹೇಮಲತಾ ನಾಯಕ** ಅವರು ತುಂಗಭದ್ರಾ ಜಲಾಶಯಕ್ಕೆ ಕ್ರೆಸ್ಟ್ ಗೇಟ್ ಜೊತೆಗೆ ಹೊಸ ಚೈನ್ ಅಳವಡಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಸಿ.ಎನ್. ಮಂಜೇಗೌಡ** ಅವರು ಬಂಡಿಪಾಳ್ಯ ಎ.ಪಿ.ಎಂ.ಸಿ ಮಾರುಕಟ್ಟೆ ಸಮಿತಿಯ ನಿವೇಶನಗಳಿಗೆ ಇ–ಖಾತೆ ಮಾಡದೆ ಇರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಉತ್ತರಿಸಿದರು.

8. **ಶ್ರೀ ರಮೇಶ್ ಬಾಬು** ಅವರು ಬಿಬಿಎಂಪಿ ವ್ಯಾಪ್ತಿಯ ಮೈಸೂರು ಬ್ಯಾಂಕ್ ಬಳಿ ಕೆಂಪೇಗೌಡ ರಸ್ತೆಯಲ್ಲಿರುವ ಪ್ರಭಾತ್ ಕಾಂಪ್ಲೆಕ್ಸ್ ವಾಣಿಜ್ಯ ಕಟ್ಟಡದಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದು, ಕೂಡಲೇ ಕ್ರಮಕೈಗೊಂಡು ನಿಯಂತ್ರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**9.** **ಶ್ರೀ ಎಂ. ನಾಗರಾಜು** ಅವರು ಬೆಂಗಳೂರು ನಗರದಲ್ಲಿ ಕಂದಾಯ ಮತ್ತು ನಗರಾಭಿವೃದ್ಧಿ ಸಂಸ್ಥೆಗಳು ಜಂಟಿ ಕಾರ್ಯಪಡೆ ರಚಿಸಿ, ಸರ್ಕಾರ ಮಂಜೂರು ಮಾಡಿದ ಭೂಮಿಗಳಿಗೆ ಪೋಡಿ ಪ್ರಕ್ರಿಯೆಗೆ ಕಾಲಬಂಧಿತ ಮಾರ್ಗಸೂಚಿ ರೂಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**10.** **ಶ್ರೀ ಪುಟ್ಟಣ್ಣ** ಅವರು ಪ್ರೌಢ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳನ್ನು ಬಿಎಲ್‌ಓ ಕೆಲಸದಿಂದ ಕೈಬಿಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರಿಸಿದರು.

## 6. ನಿಲುವಳಿ ಸೂಚನೆ

**ದಿನಾಂಕ:08.12.2025ರಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲಾವದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್ ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ಸಿ.ಟಿ. ರವಿ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಶರವಣ ಟಿ.ಎ ಹಾಗೂ ಇತರರು** ರಾಜ್ಯದಲ್ಲಿ ಕೃಷಿ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಪಡಿಸುವುದು ಹಾಗೂ ನಾಶಗೊಂಡ ಬೆಳೆಗಳಿಗೆ ಪರಿಹಾರ ಒದಗಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ವಿಷಯದ ಕುರಿತು ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೋರಿದರು.

ನಿಲುವಳಿ ಸೂಚನೆಯನ್ನು ನಿಯಮ 68ರ ಅಡಿಯಲ್ಲಿ ಚರ್ಚಿಸಲು ಅವಕಾಶ ಕಲ್ಪಿಸಿರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

## 7. ಕಾರ್ಯದರ್ಶಿಯವರ ವರದಿ

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

| ಕ್ರ ಸ | **ವಿಧೇಯಕಗಳ ಪಟ್ಟಿ** | **ಒಪ್ಪಿಗೆಯನ್ನು ಪಡೆದ ದಿನಾಂಕ** | **ಒಪ್ಪಿಗೆಯನ್ನು ನೀಡಿದವರು** |
|---|---|---|---|
| 1 | **ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.28)**<br>**THE KARNATAKA STATE CIVIL, SERVICES (REGULATION OF TRANSFER OF MEDICAL OFFICERS AND OTHER STAFF) (AMENDMENT) BILL, 2025** | 11.09.2025 | ರಾಜ್ಯಪಾಲರು |

| | | | |
|---|---|---|---|
| 2. | ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.29)<br>**THE KARNATAKA COMPULSORY SERVICE BY CANDIDATES COMPLETED MEDICAL COURSES (AMENDMENT) BILL, 2025** | 11.09.2025 | ರಾಜ್ಯಪಾಲರು |
| 3. | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.30)<br>**THE KARNATAKA STATE UNIVERSITIES (AMENDMENT) BILL, 2025** | 11.09.2025 | ರಾಜ್ಯಪಾಲರು |
| 4. | ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ವಿಧೇಯಕ, 2025 (ವಿಧೇಯಕ ಸಂ.31)<br>**THE KARNATAKA PLATFORM BASED GIG WORKERS (SOCIAL SECURITY AND WELFARE) BILL, 2025** | 11.09.2025 | ರಾಜ್ಯಪಾಲರು |
| 5. | ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.32)<br>**THE KARNATAKA MEDICAL REGISTRATION (AMENDMENT) BILL, 2025** | 09.09.2025 | ರಾಜ್ಯಪಾಲರು |
| 6. | ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.35)<br>**THE BASAVAKALYANA DEVELOPMENT BOARD (AMENDMENT) BILL, 2025** | 09.09.2025 | ರಾಜ್ಯಪಾಲರು |
| 7. | ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.36)<br>**THE KAGINELE DEVELOPMENT AUTHORITY (AMENDMENT) BILL, 2025** | 08.09.2025 | ರಾಜ್ಯಪಾಲರು |
| 8. | ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.37)<br>**THE NADAPRABHU KEMPEGOWDA HERITAGE AREA DEVELOPMENT AUTHORITY (AMENDMENT) BILL, 2025** | 10.09.2025 | ರಾಜ್ಯಪಾಲರು |

| | | | |
|---|---|---|---|
| 9. | **ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.38)**<br>**THE KITTURU DEVELOPMENT AUTHORITY (AMENDMENT) BILL, 2025** | 08.09.2025 | ರಾಜ್ಯಪಾಲರು |
| 10. | **ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.39)**<br>**THE KUDALA SANGAMA DEVELOPMENT BOARD (AMENDMENT) BILL, 2025** | 08.09.2025 | ರಾಜ್ಯಪಾಲರು |
| 11. | **ಬನವಾಸಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.40)**<br>**THE BANAVASI DEVELOPMENT AUTHORITY (AMENDMENT) BILL, 2025** | 10.09.2025 | ರಾಜ್ಯಪಾಲರು |
| 12. | **ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.41)**<br>**THE SARVAGNA KSHETRA DEVELOPMENT AUTHORITY BILL, 2025** | 09.09.2025 | ರಾಜ್ಯಪಾಲರು |
| 13. | **ಕರ್ನಾಟಕ ಅಗ್ನಿ ಶಾಮಕ ದಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.42)**<br>**THE KARNATAKA FIRE FORCE (AMENDMENT) BILL, 2025** | 10.09.2025 | ರಾಜ್ಯಪಾಲರು |
| 14. | ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.43)<br>**THE KARNATAKA GROUND WATER (REGULATION AND CONTROL OF DEVELOPMENT AND MANAGEMENT) (AMENDMENT) BILL, 2025** | 11.09.2025 | ರಾಜ್ಯಪಾಲರು |
| 15. | ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.44)<br>**THE KARNATAKA TOURISM TRADE (FACILITATION AND REGULATION) (AMENDMENT) BILL, 2025** | 10.09.2025 | ರಾಜ್ಯಪಾಲರು |
| 16. | ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.45)<br>**THE KARNATAKA ESSENTIAL SERVICES MAINTAINANCE (AMENDMENT) BILL, 2025** | 10.09.2025 | ರಾಜ್ಯಪಾಲರು |

| | | | |
|---|---|---|---|
| 17. | ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.46)<br>**THE KARNATAKA SOUHARDA SAHAKARI (AMENDMENT) BILL, 2025** | **11.09.2025** | ರಾಜ್ಯಪಾಲರು |
| 18. | ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.47)<br>**THE KARNATAKA CONDUCT OF GOVERNMENT LITIGATION (AMENDMENT) BILL, 2025** | 11.09.2025 | ರಾಜ್ಯಪಾಲರು |
| 19. | ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.49)<br>**THE KARNATAKA CO-OPERATIVE SOCIETIES (AMENDMENT) BILL, 2025** | 11.09.2025 | ರಾಜ್ಯಪಾಲರು |
| 20. | ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.50)<br>**THE KARNATAKA PORTS (LANDING AND SHIPPING FEES) (AMENDMENT) BILL, 2025** | 09.09.2025 | ರಾಜ್ಯಪಾಲರು |
| 21. | ಕರ್ನಾಟಕ ಭೂ ಸುಧಾರಣೆಗಳು ಮತ್ತು ಕೆಲವು ಇತರ ಕಾನೂನು (ತಿದುಪಡಿ) ವಿಧೇಯಕ, 2025 (ವಿಧೇಯಕ ಸಂ.51)<br>**THE KARNATAKA LAND REFORMS AND CERTAIN OTHER LAW (AMENDMENT) BILL, 2025** | 10.09.2025 | ರಾಜ್ಯಪಾಲರು |
| 22. | ಗದಗ–ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.52)<br>**THE GADAG-BETAGERI BUSINESS, CULTURE AND EXHIBITION AUTHORITY (AMENDMENT) BILL, 2025** | 11.09.2025 | ರಾಜ್ಯಪಾಲರು |
| 23. | ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.53)<br>**THE KARNATAKA MUNICIPALITIES AND CERTAIN OTHER LAW (AMENDMENT) BILL, 2025** | 11.09.2025 | ರಾಜ್ಯಪಾಲರು |
| 24. | ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.55)<br>**THE KARNTAKA TOWN AND COUNTRY PLANNING AND CERTAIN OTHER LAWS (AMENDMENT) BILL, 2025** | 11.09.2025 | ರಾಜ್ಯಪಾಲರು |

| | | | |
|---|---|---|---|
| 25. | ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.56)<br>**THE KARNATAKA MUNICIPAL CORPORATIONS (AMENDMENT) BILL, 2025** | 11.09.2025 | ರಾಜ್ಯಪಾಲರು |
| 26. | ಕರ್ನಾಟಕ ಸರಕು ಮತ್ತು ಸೇವೆಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.57)<br>**THE KARNATAKA GOODS AND SERVICES TAX (AMENDMENT) BILL, 2025** | 02.09.2025 | ರಾಜ್ಯಪಾಲರು |
| 27. | ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.58)<br>**THE GREATER BENGALURU GOVERNANCE (AMENDMENT) BILL, 2025** | 11.09.2025 | ರಾಜ್ಯಪಾಲರು |
| 28. | ಕರ್ನಾಟಕ ನಿರಪರಾಧೀಕರಣ (ಉಪಬಂಧಗಳ ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.59)<br>**THE KARNATAKA DECRIMINALISATION (AMENDMENT OF PROVISIONS) BILL, 2025** | 11.09.2025 | ರಾಜ್ಯಪಾಲರು |
| 29. | ಕರ್ನಾಟಕ ಧನವಿನಿಯೋಗ (ಸಂ.3) ವಿಧೇಯಕ, 2025 (ವಿಧೇಯಕ ಸಂ.60)<br>**THE KARNATAKA APROPRIATION (No.3) BILL, 2025** | 02.09.2025 | ರಾಜ್ಯಪಾಲರು |
| 30. | ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025 (ವಿಧೇಯಕ ಸಂ.62)<br>**THE KARNATAKA TRADITIONAL MIGRATORY SHEPHERDS (WELFARE MEASURES AND PROTECTION AGAINST ATROCITIES) BILL, 2025** | 11.09.2025 | ರಾಜ್ಯಪಾಲರು |
| 31. | ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕ, 2025 (ವಿಧೇಯಕ ಸಂ.64)<br>**THE KARNATAKA APPOINTMENT OF RECOVERY COMMISSIONER FOR SEIZURE AND ATTACHMENT OF PROPERTY OF ILLEGAL MINING AND PROCEEDS OF CRIME BILL, 2025** | 09.09.2025 | ರಾಜ್ಯಪಾಲರು |

| | | | |
|---|---|---|---|
| 32. | ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.65)<br>**THE KARNATAKA LIFTS, ESCALATORS AND PASSENGER CONVEYORS (AMENDMENT) BILL, 2025** | 09.09.2025 | ರಾಜ್ಯಪಾಲರು |
| 33. | ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.66)<br>**THE BASAVANA BAGEWADI DEVELOPMENT AUTHORITY (AMENDMENT) BILL, 2025** | 25.09.2025 | ರಾಜ್ಯಪಾಲರು |

ಮಧ್ಯಾಹ್ನ 2.45 ಗಂಟೆಗೆ ಸದನವನ್ನು ಮುಂದೂಡಿ, ಮಧ್ಯಾಹ್ನ 4.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಸದನವು ಮಧ್ಯಾಹ್ನ 4.10 ಗಂಟೆಗೆ ಮಾನ್ಯ ಉಪ ಸಭಾಪತಿಯವರ (**ಶ್ರೀ ಎಂ.ಕೆ. ಪ್ರಾಣೇಶ್**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 8. ಗಮನ ಸೆಳೆಯುವ ಸೂಚನೆಗಳು

**1.** **ಶ್ರೀ ಡಿ.ಎಸ್. ಅರುಣ್** ಅವರು ನಗರಾಭಿವೃದ್ಧಿ ಇಲಾಖೆಯಿಂದ ಹಂಚಿಕೆ ಮಾಡುವ ಸಿ.ಎ. ನಿವೇಶನಗಳಿಗೆ ಸಾರ್ವಜನಿಕರು ನಿರಾಸಕ್ತಿ ತೋರಿಸುತ್ತಿರುವ ಬಗ್ಗೆ ಹಾಗೂ ಗುತ್ತಿಗೆಯನ್ನು ವಿಸ್ತರಿಸುವ ಪ್ರಕ್ರಿಯೆಯಲ್ಲಿ ಇಲಾಖೆಯು ಸಮರ್ಪಕವಾದ ನೀತಿಯನ್ನು ಅನುಸರಿಸುತ್ತಿಲ್ಲದಿರುವ ಕುರಿತು ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಗಮನ ಸೆಳೆದರು.

ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಡಿ.ಎಸ್. ಅರುಣ್
2. ರಮೇಶ್ ಬಾಬು
3. ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)
4. ಡಾ: ಧನಂಜಯ ಸರ್ಜಿ
5. ಕೆ. ವಿವೇಕಾನಂದ
6. ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
7. ಪುಟ್ಟಣ್ಣ
8. ಸಿ.ಟಿ. ರವಿ
9. ಸಿ.ಎನ್. ಮಂಜೇಗೌಡ
10. ಎಸ್.ಎಲ್. ಭೋಜೇಗೌಡ

ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಸ್ಪಷ್ಟೀಕರಣ ನೀಡಿದರು.

2. **ಶ್ರೀ ಗೋವಿಂದ ರಾಜು** ಅವರು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ರಾಜ್ಯದ 32 ಕಡೆಗಳಲ್ಲಿ ಸುಮಾರು 784 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಶ್ರಮಿಕ ವಸತಿ ಸಹಿತ ಶಾಲೆಗಳ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಕುರಿತು ಮಾನ್ಯ ಕಾರ್ಮಿಕ ಸಚಿವರ ಗಮನ ಸೆಳೆದರು.

ಮಾನ್ಯ ಕಾರ್ಮಿಕ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರಿಸಿದರು.

3. **ಶ್ರೀ ಬಸನಗೌಡ ಬಾದರ್ಲಿ** ಅವರು ಆಹಾರ ಪದಾರ್ಥಗಳನ್ನು ಸಂರಕ್ಷಿಸುವ ಉದ್ದೇಶದಿಂದ ಸಿಂಧನೂರಿನ ಹೃದಯ ಭಾಗದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ವತಿಯಿಂದ ನಿರ್ಮಾಣ ಮಾಡಲಾಗಿರುವ 40 ವರ್ಷಗಳ ಹಿಂದಿನ ಗೋದಾಮು ಶಿಥಿಲಾವಸ್ಥೆಯಲ್ಲಿದ್ದು, ಸದರಿ ಜಾಗವನ್ನು ಸಂರಕ್ಷಣೆ ಮಾಡಿ ಸರ್ಕಾರದ ಇನ್ನಿತರೆ ಅಗತ್ಯ ಕಟ್ಟಡಗಳ ನಿರ್ಮಾಣಕ್ಕೆ ಬಳಸಿಕೊಳ್ಳುವ ಕುರಿತು ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರ ಗಮನ ಸೆಳೆದರು.

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಉತ್ತರಿಸಿದರು.

## 9. ನಿಯಮ 330ರ ಮೇರೆಗೆ

1. **ಶ್ರೀಯುತರುಗಳಾದ ಪುಟ್ಟಣ್ಣ, ಶಶೀಲ್ ಜಿ. ನಮೋಶಿ, ಎಸ್.ವ್ಹಿ. ಸಂಕನೂರ ಮತ್ತು ಎಸ್.ಎಲ್. ಭೋಜೇಗೌಡ** ಅವರುಗಳು ಖಾಸಗಿ ಅನುದಾನಿತ/ಅನುದಾನ ರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಸರ್ಕಾರವು ಹೊರಡಿಸಿರುವ ಆದೇಶ ಸಂಖ್ಯೆ: ಇಡಿ/709/ಪಿಜಿಸಿ/2017, ದಿನಾಂಕ:08.03.2018ರಲ್ಲಿ ಉಲ್ಲೇಖಿಸಲಾಗಿರುವ ಶಾಲೆಗಳ ಮಾನ್ಯತೆ ನವೀಕರಣದ ನಿಯಮಗಳನ್ನು ಸಡಿಲಗೊಳಿಸುವ ವಿಷಯದ ಕುರಿತು ಪ್ರಸ್ತಾಪಿಸಿದರು.

ಶ್ರೀಯುತರುಗಳಾದ:

1. ಶಶೀಲ್ ಜಿ. ನಮೋಶಿ
2. ಎಸ್.ವ್ಹಿ. ಸಂಕನೂರ
3. ಎಸ್.ಎಲ್. ಭೋಜೇಗೌಡ
4. ರಾಮೋಜಿಗೌಡ
5. ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)
6. ರಮೇಶ್ ಬಾಬು
7. ನಿರಾಣಿ ಹಣಮಂತ್ ರುದ್ರಪ್ಪ
8. ಕೆ. ಅಬ್ದುಲ್ ಜಬ್ಬರ್
9. ಹೇಮಲತಾ ನಾಯಕ
10. ಡಾ: ಧನಂಜಯ ಸರ್ಜಿ
11. ಬಲ್ಕೀಸ್ ಬಾನು

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರಿಸಿದರು.

ಮಾನ್ಯ ಶಾಸಕರುಗಳ ಒತ್ತಾಯದ ಮೇರೆಗೆ ವಿಶೇಷ ಸದನ ಸಮಿತಿ ರಚಿಸಲು ಮಾನ್ಯ ಸಚಿವರು ಒಪ್ಪಿಗೆಯನ್ನು ಸೂಚಿಸಿದರು.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242ಎ ರೀತ್ಯಾ, ವಿಶೇಷ ಸದನ ಸಮಿತಿಯನ್ನು ನೇಮಕ ಮಾಡಲಾಗಿದೆ ಎಂದು ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಪ್ರಕಟಿಸಿದರು.

ಮಾನ್ಯ ಶಾಸಕರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಅವರು ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಕುರಿತು ಪ್ರತಿದಿನ 2 ಗಂಟೆಗಳ ಕಾಲ ಚರ್ಚಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿದರು.

ಪ್ರತಿ ಬುಧವಾರ ಪ್ರಶ್ನೋತ್ತರ ನಂತರ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಕುರಿತು ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ತಿಳಿಸಿದರು.

## ನಿಯಮ 330ರ ಮೇರೆಗೆ

**2. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಶ್ರೀ ಕೆ.ಎಸ್. ನವೀನ್** ಅವರುಗಳು ರಾಜ್ಯದಲ್ಲಿ ಮಧ್ಯಪಾನ ಸೇವನೆ ಮಾಡುತ್ತಿರುವವರು ಲಿವರ್ ಸಿರೋಸಿಸ್/ಜಾಂಡೀಸ್ ಎಂಬ ಪಿತ್ತಕೋಶ ಖಾಯಿಲೆಯಿಂದ ಬಳಲುತ್ತಿದ್ದು, ಅವರುಗಳ ಉತ್ತಮ ಚಿಕಿತ್ಸೆಗಾಗಿ ಅಬಕಾರಿ ಇಲಾಖೆಯ ಆದಾಯದ ಕನಿಷ್ಠ ಶೇ.20ರಷ್ಟು ಮೊತ್ತವನ್ನು ವಿನಿಯೋಗಿಸುವ ಕುರಿತು ಪ್ರಸ್ತಾಪಿಸಿದರು.

ಸಂಜೆ 6.35 ಗಂಟೆಯಲ್ಲಿ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಕೆ.ಎಸ್. ನವೀನ್

ಸಂಜೆ 6.55 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿ ಪೀಠದಲ್ಲಿ ಆಸೀನರಾದರು.

ಶ್ರೀಯುತರುಗಳಾದ:

2. ಸಿ.ಟಿ. ರವಿ
3. ಶಿವಕುಮಾರ್ ಕೆ.
4. ರಮೇಶ್ ಬಾಬು
5. ಬಿ.ಕೆ. ಹರಿಪ್ರಸಾದ್
6. ಭಾರತಿ ಶೆಟ್ಟಿ
7. ಹೇಮಲತಾ ನಾಯಕ
8. ಕೆ.ಎಸ್. ನವೀನ್

ಮಾನ್ಯ ಅಬಕಾರಿ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರಿಸಿದರು.

ಸಂಜೆ 7.50 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ: 09.12.2025ರಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

****

**ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತೇಳನೆಯ ಅಧಿವೇಶನ

ಲಘು ಪ್ರಕಟಣೆ ಭಾಗ – 1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಮಂಗಳವಾರ, ದಿನಾಂಕ:09.12.2025

**(02)**

ದಿನಾಂಕ:09.12.2025 ರಂದು ಬೆಳಗ್ಗೆ 11.28 ಗಂಟೆಗೆ ಮಾನ್ಯ ಉಪ ಸಭಾಪತಿಯವರ **(ಶ್ರೀ ಎಂ.ಕೆ. ಪ್ರಾಣೇಶ್)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:09.12.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IIರ 2ನೇ ಪಟ್ಟಿಯ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 16(172)
2. 17(299)
3. 18(196)
4. 19(205)
5. 20(262) ಗೈರು ಹಾಜರಿ
6. 21(198)
7. 22(180)
8. 23(194)
9. 24(246)
10. 25(170) ಗೈರು ಹಾಜರಿ
11. 26(201)
12. 27(308)
13. 28(255)
14. 29(239)
15. 30(235)

ದಿನಾಂಕ:09.12.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIರ 2ನೇ ಪಟ್ಟಿಯ ಒಟ್ಟು 126 ಪ್ರಶ್ನೆಗಳ ಪೈಕಿ 76 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರ ಪರವಾಗಿ ಮಾನ್ಯ ಕೃಷಿ ಸಚಿವರು ಮಂಡಿಸಿದರು.

# 1. ಶೂನ್ಯವೇಳೆ ಪ್ರಸ್ತಾವಗಳು

1. **ಶ್ರೀಮತಿ ಭಾರತಿ ಶೆಟ್ಟಿ** ಅವರು ವಿದೇಶಿ ನಾಯಿಗಳನ್ನು ನಮ್ಮ ರಾಜ್ಯದಲ್ಲಿ ಸಾಕುವುದನ್ನು ಪ್ರತಿಬಂಧಿಸಲು ಅಗತ್ಯ ಕಾನೂನು ನಿಯಮಗಳನ್ನು ರಚಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಕೃಷಿ ಸಚಿವರು ತಿಳಿಸಿದರು.

2. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ಕೃಷ್ಣಾ ನದಿ, ಭೀಮಾ ನದಿ ಹಾಗೂ ಕಾಗಿಣ ನದಿ ಹರಿಯುವ ಬಾಗಲಕೋಟೆ, ರಾಯಚೂರು ಜಿಲ್ಲೆಗಳಲ್ಲಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಉಪಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಕೃಷಿ ಸಚಿವರು ತಿಳಿಸಿದರು.

3. **ಶ್ರೀ ಪಿ.ಹೆಚ್. ಪೂಜಾರ್** ಅವರು ನೇಕಾರರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರ ನೀಡುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

4. **ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) ಹಾಗೂ ಶ್ರೀ ಶರವಣ ಟಿ.ಎ** ಅವರು ಕಲಬುರಗಿಯಲ್ಲಿ ಪಿ.ಎಂ ಮಿತ್ರ ಮೆಗಾ ಜವಳಿ ಪಾರ್ಕ್ ಯೋಜನೆ ಆರಂಭಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಕೃಷಿ ಸಚಿವರು ತಿಳಿಸಿದರು.

5. **ಶ್ರೀ ಶಾಂತರಾಮ್ ಬುಡ್ನ** ಸಿದ್ದಿ ಅವರು ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಬಜಾರಕುಣಂಗ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹೊಸ ನ್ಯಾಯಬೆಲೆ ಅಂಗಡಿಯನ್ನು ತೆರೆಯುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಕೃಷಿ ಸಚಿವರು ತಿಳಿಸಿದರು.

6. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ರಾಜ್ಯ ಸರ್ಕಾರಿ ನೌಕರರಿಂದ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯಡಿ ವೇತನದಿಂದ ಮಾಸಿಕ ವಂತಿಗೆ ಕಡಿತಗೊಳಿಸುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಕೃಷಿ ಸಚಿವರು ತಿಳಿಸಿದರು.

7. **ಶ್ರೀ ಶಶೀಲ್ ಜಿ. ನಮೋಶಿ** ಅವರು ಕಲಬುರಗಿ ಜಿಲ್ಲೆಗೆ ವಿವಿಧ ಕಂಪನಿಗಳಿಂದ ವಿಮಾನ ಸೇವೆಯನ್ನು ಆರಂಭಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಉತ್ತರಿಸಿದರು.

8. **ಶ್ರೀ ರಾಮೋಜಿಗೌಡ** ಅವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಸೇರಿದಂತೆ 155 ಮಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯಮ ಬಾಹಿರವಾಗಿ ನೇಮಕ ಮಾಡಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಎಂ.ಎಲ್. ಅನಿಲ್ ಕುಮಾರ್** ಅವರು ಕೋಲಾರ ಜಿಲ್ಲೆಯ ತೇರಹಳ್ಳಿ ಬೆಟ್ಟದಲ್ಲಿರುವ ಕೊಂಡರಾಜನಹಳ್ಳಿ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ರಮೇಶ್ ಬಾಬು** ಅವರು ಕರ್ನಾಟಕ ಮಾಹಿತಿ ಆಯೋಗಕ್ಕೆ ಅಗತ್ಯವಿರುವ ಸಿಬ್ಬಂದಿಗಳನ್ನು ಖಾಯಂ ಆಗಿ ನೇಮಕ ಮಾಡಲು ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

11. **ಶ್ರೀ ಡಿ.ಎಸ್. ಅರುಣ್** ಅವರು ಉತ್ತರ ಕರ್ನಾಟಕ ಭಾಗದಲ್ಲಿ ಅತಿವೃಷ್ಟಿಯಿಂದಾಗಿ ಸಂತ್ರಸ್ತರಾಗಿರುವ ಕುಟುಂಬಗಳಿಗೆ ವೈಜ್ಞಾನಿಕ ರೀತಿಯಲ್ಲಿ ಪರಿಹಾರ ಮಂಜೂರು ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

12. **ಶ್ರೀಮತಿ ಬಲ್ಕೀಸ್ ಬಾನು** ಅವರು ಅತ್ಯಾಧುನಿಕ ಮಳೆ ಮಾಪಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕೃಷಿ ಸಚಿವರು ಉತ್ತರಿಸಿದರು.

13. **ಶ್ರೀ ಗೋವಿಂದ ರಾಜು** ಅವರು ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ಕಾರಿಡಾರ್ ಅಭಿವೃದ್ಧಿ ಕಾಮಗಾರಿಯಿಂದಾಗಿ ಕೋಲಾರ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ಹಾನಿಯಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

14. **ಡಾ: ಎಂ.ಜಿ. ಮುಳೆ** ಅವರು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಮೂಲಸೌಕರ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ಸಭೆಯ ಮುಂದಿಡಲಾಗುವ ಕಾಗದ ಪತ್ರ

ಮಾನ್ಯ ಮುಖ್ಯಮಂತ್ರಿಗಳ ಹಾಗೂ ಸಂಬಂಧಪಟ್ಟ ಮಾನ್ಯ ಸಚಿವರುಗಳ ಪರವಾಗಿ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಒಂದನೇ ಮತ್ತು ಎರಡನೇ ಪಟ್ಟಿಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 4. ಅರ್ಜಿಗಳನ್ನೊಪ್ಪಿಸುವುದು

1. **ಶ್ರೀ ಎಸ್.ಎಲ್. ಭೋಜೇಗೌಡ** ಅವರು ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿಪಡಿಸುತ್ತಿರುವ ಇಂದಾವರ ಗ್ರಾಮದ ವಸತಿ ಬಡಾವಣೆಯ ಭೂ ಮಾಲೀಕರಿಗೆ ಆಗಿರುವ ಅನ್ಯಾಯ-ಭ್ರಷ್ಟಾಚಾರ ಮತ್ತು ಅಲ್ಲಿ ನಡೆಯುತ್ತಿರುವ ಕಳಪೆ ಕಾಮಗಾರಿಗಳ ಕುರಿತು ಅರ್ಜಿಯನ್ನೊಪ್ಪಿಸಿದರು.

2. **ಶ್ರೀ ರಮೇಶ್ ಬಾಬು** ಅವರು ಬೆಂಗಳೂರು ವಾರ್ಡ್ ನಂ.94 ಆಸ್ತಿ ಸಂಖ್ಯೆ:4ರಲ್ಲಿ ಕಾನೂನುಬಾಹಿರವಾಗಿ ನಕ್ಷೆ ಉಲ್ಲಂಘನೆ ಮಾಡಿ ಕಟ್ಟಡವನ್ನು ನಿರ್ಮಿಸುತ್ತಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಕುರಿತು ಅರ್ಜಿಯನ್ನೊಪ್ಪಿಸಿದರು.

ಮಧ್ಯಾಹ್ನ 1.50 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಪ್ರಕಟಿಸಿದರು.

ಸದನವು ಮಧ್ಯಾಹ್ನ 3.20 ಗಂಟೆಗೆ ಮಾನ್ಯ ಉಪ ಸಭಾಪತಿಯವರ **(ಶ್ರೀ ಎಂ.ಕೆ. ಪ್ರಾಣೇಶ್)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 5. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ

**ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್ ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ಸಿ.ಟಿ. ರವಿ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಶರವಣ ಟಿ.ಎ ಹಾಗೂ ಇತರರು** ರಾಜ್ಯದಲ್ಲಿ ಕೃಷಿ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಪಡಿಸುವುದು ಹಾಗೂ ನಾಶಗೊಂಡ ಬೆಳೆಗಳಿಗೆ ಪರಿಹಾರ ಒದಗಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ವಿಷಯದ ಕುರಿತು ಚರ್ಚೆ.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಚರ್ಚೆಯನ್ನು ಪ್ರಾರಂಭಿಸಿದರು.

## 6. ಕ್ರಿಯಾಲೋಪ

ನಿಯಮ 68ರಡಿ ಕೃಷಿ ಬೆಳೆಗಳಿಗೆ ಬೆಂಬಲ ಬೆಲೆ ಹಾಗೂ ಪರಿಹಾರ ಒದಗಿಸುವ ವಿಷಯವನ್ನು ಚರ್ಚಿಸುವ ಸಂದರ್ಭದಲ್ಲಿ ಶಿಕ್ಷಣ ಹಾಗೂ ರಸ್ತೆ, ನೀರು ಇನ್ನಿತರೆ ವಿಷಯಗಳ ಕುರಿತು ಪ್ರಸ್ತಾಪಿಸಲಾಗುತ್ತಿರುವುದು ಕ್ರಮಬದ್ಧವಾಗಿಲ್ಲವೆಂದು ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಕ್ರಿಯಾಲೋಪವನ್ನೆತ್ತಿದರು.

ಯಾವುದೇ ವಿಷಯವನ್ನು ಚರ್ಚಿಸುವ ಸಂದರ್ಭದಲ್ಲಿ ಉದಾಹರಣೆಗಳೊಂದಿಗೆ ಪ್ರಸ್ತಾಪಿಸಿ ಸರ್ಕಾರದ ಗಮನಕ್ಕೆ ತರುವಂತಹ ಪ್ರಕ್ರಿಯೆಯಾಗಿದ್ದು, ಇದರಿಂದ ಯಾರಿಗೂ ಧಕ್ಕೆಯಾಗಿರುವುದಿಲ್ಲ/ಯಾವುದೇ ಲೋಪವು ಆಗಿರುವುದಿಲ್ಲ ಎಂದು ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ತಿಳಿಸಿದರು.

## ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಚರ್ಚೆ

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

2. ಶ್ರೀ ಸಿ.ಟಿ. ರವಿ

ಮಧ್ಯಾಹ್ನ 4.18 ಗಂಟೆಯಲ್ಲಿ **ಶ್ರೀಮತಿ ಭಾರತಿ ಶೆಟ್ಟಿ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

ಮಧ್ಯಾಹ್ನ 4.38 ಗಂಟೆಗೆ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿ ಪೀಠದಲ್ಲಿ ಆಸೀನರಾದರು.

ಸಂಜೆ 5.56 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ: 10.12.2025ರಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**

**ಕಾರ್ಯದರ್ಶಿ**

****

**ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತೇಳನೆಯ ಅಧಿವೇಶನ
ಲಘು ಪ್ರಕಟಣೆ ಭಾಗ–1
ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ
ಬುಧವಾರ, ದಿನಾಂಕ:10.12.2025
**(03)**

ದಿನಾಂಕ:10.12.2025ರಂದು ಬೆಳಗ್ಗೆ 11.20 ಗಂಟೆಗೆ ಸದನವು ಮಾನ್ಯ ಉಪ ಸಭಾಪತಿಯವರ **(ಶ್ರೀ ಎಂ.ಕೆ. ಪ್ರಾಣೇಶ್)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:10.12.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IIIರ 3ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 31(461) | |
| 2. | 32(326) | |
| 3. | 33(407) | |
| 4. | 34(414) | |
| 5. | 35(342) | ಡಾ: ಉಮಾಶ್ರೀ ಪರವಾಗಿ ಶ್ರೀ ಐವನ್ ಡಿ'ಸೋಜಾ |
| 6. | 36(439) | |
| 7. | 37(406) | |
| 8. | 38(453) | |
| 9. | 39(402) | |
| 10. | 40(416) | |
| 11. | 41(418) | ಶ್ರೀ ಪಿ.ಹೆಚ್. ಪೂಜಾರ್ ಪರವಾಗಿ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ |
| 12. | 42(446) | |
| 13. | 43(339) | |
| 14. | 44(375) | |
| 15. | 45(434) | |

ದಿನಾಂಕ:10.12.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIIರ 3ನೇ ಪಟ್ಟಿಯ ಒಟ್ಟು 137 ಪ್ರಶ್ನೆಗಳ ಪೈಕಿ 88 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ ಪ್ರಸ್ತಾವಗಳು

1. **ಡಾ: ತಳವಾರ್ ಸಾಬಣ್ಣ** ಅವರು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು.

2. **ಶ್ರೀ ಸಿ.ಟಿ. ರವಿ** ಅವರು ಬೆಳಗಾವಿ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರಿಸಿದರು.

3. **ಶ್ರೀಮತಿ ಹೇಮಲತಾ ನಾಯಕ** ಅವರು ಗಂಗಾವತಿ ತಾಲ್ಲೂಕಿನಲ್ಲಿ ತಾಂತ್ರಿಕ ಮತ್ತು ವೈದ್ಯಕೀಯ ವಿದ್ಯಾರ್ಥಿಗಳ ವಸತಿ ನಿಲಯದಲ್ಲಿ ಮೂಲಸೌಕರ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)** ಅವರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮಧ್ಯಮಾವಧಿ–ದೀರ್ಘಾವಧಿಗೆ ವಿತರಿಸುವ ಸಾಲಗಳಿಗೆ ನಿಗದಿಪಡಿಸಿರುವ ಬಡ್ಡಿದರ ಪರಿಷ್ಕರಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಐವನ್ ಡಿ'ಸೋಜಾ** ಅವರು ರಾಜ್ಯ ಸರ್ಕಾರಿ ನಿವೃತ್ತ ನೌಕರರಿಗೆ ದಿನಾಂಕ:01.07.2022ರಿಂದ ಜಾರಿಗೆ ಬರುವಂತೆ ವೇತನ ಭತ್ಯೆಗಳ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಲು ಪರಿಗಣಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ರಮೇಶ್ ಬಾಬು** ಅವರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ಸಂಘ ಸಂಸ್ಥೆಗಳಿಗೆ, ಸಮುದಾಯ ಭವನ ಹಾಗೂ ವಿದ್ಯಾರ್ಥಿನಿಲಯಗಳ ನಿರ್ಮಾಣದ ಸಹಾಯಧನವನ್ನು ಸರ್ಕಾರಿ ಆದೇಶದ ಅನುಗುಣವಾಗಿ ಹಂಚಿಕೆ ಮಾಡದಿರುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಎಫ್.ಹೆಚ್. ಜಕ್ಕಪ್ಪನವರ್** ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲು ನಿಧಿಯನ್ನು 2013 ಮತ್ತು 2017ರ ಅಧಿನಿಯಮ ಪ್ರಕಾರ ಪರಿಶಿಷ್ಟ ವರ್ಗಗಳ ನೈಜ ಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮಾತ್ರ ವಿನಿಯೋಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಕಿಶೋರ್ ಕುಮಾರ್ ಪುತ್ತೂರ್** ಅವರು ಮಳೆ ಮಾಪಕ ಹಾಗೂ ಹವಾಮಾನ ದಾಖಲು ಯಂತ್ರಗಳು ಸುಸ್ಥಿಯಲ್ಲಿ ಇಲ್ಲದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕೃಷಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಜಗದೇವ್ ಗುತ್ತೇದಾರ್** ಅವರು ರಾಜ್ಯದಲ್ಲಿ ಸುಳ್ಳು ಪೋಕ್ಸೋ ಮೊಕದ್ದಮೆಗಳು ದಾಖಲಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

10. **ಶ್ರೀ ಮಂಜುನಾಥ್ ಭಂಡಾರಿ** ಅವರು ಬೈಂದೂರನ್ನು ಪಟ್ಟಣ ಪಂಚಾಯತ್ ಆಗಿ ಮೇಲ್ದರ್ಜೆಗೇರಿಸಿರುವುದನ್ನು ರೈತರು ವಿರೋಧಿಸುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

11. **ಶ್ರೀ ಎಂ. ನಾಗರಾಜು** ಅವರು ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ 10 ಪ್ರಮುಖ ಇಲಾಖೆಗಳ ಶಾಶ್ವತ ಕಚೇರಿಗಳನ್ನು ಸ್ಥಳಾಂತರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ಶೂನ್ಯವೇಳೆ ಪ್ರಸ್ತಾವಗಳಿಗೆ ಉತ್ತರ

1. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ರಾಜ್ಯದಲ್ಲಿ ಇತ್ತೀಚೆಗೆ ಸರ್ಕಾರಿ ವಸತಿ ನಿಲಯಗಳಲ್ಲಿ ಬಾಲಕಿಯರು ಗರ್ಭಿಣಿಯರಾಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವ ಕುರಿತು ದಿನಾಂಕ:08.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಪಿ.ಹೆಚ್. ಪೂಜಾರ್** ಅವರು ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರಿಗೆ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಕೇವಲ ಪಾಠ ಬೋಧನೆಗಳಿಗೆ ಸೀಮಿತಗೊಳಿಸಿ ಇತರೆ ಕೆಲಸಗಳಿಗೆ ನಿಯೋಜನೆ ಮಾಡದಂತೆ ಕ್ರಮಕೈಗೊಳ್ಳುವ ಕುರಿತು ದಿನಾಂಕ:08.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಎಂ. ನಾಗರಾಜು** ಅವರು ಬೆಂಗಳೂರು ನಗರದಲ್ಲಿ ಕಂದಾಯ ಮತ್ತು ನಗರಾಭಿವೃದ್ಧಿ ಸಂಸ್ಥೆಗಳು ಜಂಟಿ ಕಾರ್ಯಪಡೆ ರಚಿಸಿ, ಸರ್ಕಾರ ಮಂಜೂರು ಮಾಡಿದ ಭೂಮಿಗಳಿಗೆ ಪೋಡಿ ಪ್ರಕ್ರಿಯೆಗೆ ಕಾಲಬಂಧಿತ ಮಾರ್ಗಸೂಚಿ ರೂಪಿಸುವ ಕುರಿತು ದಿನಾಂಕ:08.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ಪುಟ್ಟಣ್ಣ** ಅವರು ಪ್ರೌಢ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳನ್ನು ಬಿಎಲ್‌ಓ ಕೆಲಸದಿಂದ ಕೈಬಿಡುವ ಕುರಿತು ದಿನಾಂಕ:08.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಶ್ರೀ ಶಾಂತರಾಮ್ ಬುಡ್ನ ಸಿದ್ದಿ** ಅವರು ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಬಜಾರಕುಣಂಗ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹೊಸ ನ್ಯಾಯಬೆಲೆ ಅಂಗಡಿಯನ್ನು ತೆರೆಯುವ ಕುರಿತು ದಿನಾಂಕ:09.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಶ್ರೀ ಶಶೀಲ್ ಜಿ. ನಮೋಶಿ** ಅವರು ಕಲಬುರಗಿ ಜಿಲ್ಲೆಗೆ ವಿವಿಧ ಕಂಪನಿಗಳಿಂದ ವಿಮಾನ ಸೇವೆಯನ್ನು ಆರಂಭಿಸುವ ಕುರಿತು ದಿನಾಂಕ:09.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

7. **ಶ್ರೀ ಎಂ.ಎಲ್. ಅನಿಲ್ ಕುಮಾರ್** ಅವರು ಕೋಲಾರ ಜಿಲ್ಲೆಯ ತೇರಹಳ್ಳಿ ಬೆಟ್ಟದಲ್ಲಿರುವ ಕೊಂಡರಾಜನಹಳ್ಳಿ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಕುರಿತು ದಿನಾಂಕ:09.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 4. ವರದಿಯನ್ನೊಪ್ಪಿಸುವುದು

**ಶ್ರೀ ಸಿ.ಟಿ. ರವಿ (ಸದಸ್ಯರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ)** ಅವರು 2024–25ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಒಂದನೇ ವರದಿಯನ್ನೊಪ್ಪಿಸಿದರು.

ಮಧ್ಯಾಹ್ನ 1.45 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಸದನವು ಮಧ್ಯಾಹ್ನ 3.30 ಗಂಟೆಗೆ ಮಾನ್ಯ ಉಪ ಸಭಾಪತಿಯವರ (**ಶ್ರೀ ಎಂ.ಕೆ. ಪ್ರಾಣೇಶ್**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 5. ಪ್ರಕಟಣೆ

**1.** ಜಿಲ್ಲಾಡಳಿತ, ಬೆಳಗಾವಿ ಹಾಗೂ ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಬೆಳಗಾವಿ ಸುವರ್ಣ ವಿಧಾನಸೌಧ ಆವರಣದಲ್ಲಿ ಉದ್ಯಾನವನ ಹಾಗೂ ಸೌಂದರ್ಯೀಕರಣದ ಕಾಮಗಾರಿಯ ಉದ್ಘಾಟನಾ ಸಮಾರಂಭವನ್ನು ದಿನಾಂಕ:10.12.2025ರಂದು ಸಂಜೆ 7.00 ಗಂಟೆಗೆ ಬೆಳಗಾವಿಯ ಸುವರ್ಣ ವಿಧಾನಸೌಧ ಆವರಣದಲ್ಲಿ ಏರ್ಪಡಿಸಲಾಗಿದ್ದು, ಸದರಿ ಸಮಾರಂಭಕ್ಕೆ ಮಾನ್ಯ ಶಾಸಕರುಗಳು ಭಾಗವಹಿಸಬೇಕೆಂದು ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ದಿನಾಂಕ:10.12.2025ರಂದು ಪ್ರಕಟಿಸಿದರು.

**2.** ಶಿವಲೀಲಾ ಚಲನಚಿತ್ರ ಸಾವಿರಾರು ನೊಂದಿರುವ ಮಂಗಳಮುಖಿಯರ ಜೀವನದ ಒಂದು ಭಾಗ, ಆತ್ಮಚರಿತ್ರೆ.

ಪ್ರತಿದಿನ ಸಮಾಜದಲ್ಲಿ ಶೋಷಣೆ ಅನುಭವಿಸುತ್ತಿರುವ ಹಾಗೂ ತುಳಿತಕ್ಕೆ ಒಳಗಾಗಿರುವ ಅದೆಷ್ಟೋ ಮಂಗಳಮುಖಿಯರ ಕಥೆ ಇದು. ಈ ಚಿತ್ರವು ನಮ್ಮ ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ಜಯರಾಮ್ ಕ್ರಿಯೇಷನ್ಸ್ ಇವರಿಂದ ಬಿಡುಗಡೆ ಆಗುತ್ತಿದೆ. ಈ ಚಿತ್ರದಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಸಮುದಾಯದ ಹೆಮ್ಮೆಯ ಪದ್ಮಶ್ರೀ ಪುರಸ್ಕೃತ ಡಾ: ಜೋಗುತಿ ಮಂಜಮ್ಮ ಅವರು ನಟಿಸಿ ಗಮನ ಸೆಳೆದಿದ್ದಾರೆ. 400ಕ್ಕೂ ಹೆಚ್ಚು ಮಂಗಳಮುಖಿಯರು ಸ್ವಯಂ ಅಭಿನಯಿಸಿರುವ ಅದ್ಭುತ ಸಂದೇಶವುಳ್ಳ ಚಿತ್ರವಾಗಿದ್ದು, ಸಮಾಜಕ್ಕೆ ಹಾಗೂ ಜಾಲತಾಣಕ್ಕೆ ಒಂದು ಸಂದೇಶ ನೀಡುತ್ತದೆ.

ದಿನಾಂಕ:10.12.2025ರ ಬುಧವಾರದಂದು ಸಂಜೆ 07.00 ಗಂಟೆಗೆ ನೆಕ್ಸಸ್ ಮಾಲ್, ಬೆಳಗಾವಿ ಇಲ್ಲಿ ಶಿವಲೀಲಾ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಮಾನ್ಯ ಶಾಸಕರುಗಳು ಭಾಗವಹಿಸಬೇಕೆಂದು ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ದಿನಾಂಕ:10.12.2025ರಂದು ಪ್ರಕಟಿಸಿದರು.

## 6. ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ವಿಶೇಷ ಚರ್ಚೆ

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

ಮಧ್ಯಾಹ್ನ 4.17 ಗಂಟೆಯಲ್ಲಿ **ಶ್ರೀಮತಿ ಭಾರತಿ ಶೆಟ್ಟಿ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

2. ಶ್ರೀ ಅಡಗೂರ್ ಹೆಚ್. ವಿಶ್ವನಾಥ್

ಮಧ್ಯಾಹ್ನ 4.45 ಗಂಟೆಗೆ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿ ಪೀಠದಲ್ಲಿ ಆಸೀನರಾದರು.

3. ಶ್ರೀ ಶಿವಕುಮಾರ್ ಕೆ.
4. ಶ್ರೀ ಶಶೀಲ್ ಜಿ. ನಮೋಶಿ

ಸಂಜೆ 6.00 ಗಂಟೆಗೆ ಸದನವನ್ನು ಮುಂದೂಡಿ, ದಿನಾಂಕ:11.12.2025ರಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೇಳನೆಯ ಅಧಿವೇಶನ
ಲಘು ಪ್ರಕಟಣೆ ಭಾಗ–1
ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ
ಗುರುವಾರ, ದಿನಾಂಕ:11.12.2025
**(04)**

ದಿನಾಂಕ:11.12.2025 ರಂದು ಬೆಳಗ್ಗೆ 11.14 ಗಂಟೆಗೆ ಸದನವು ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:11.12.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IVರ 4ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 46(606) | |
| 2. | 47(585) | |
| 3. | 48(499) | |
| 4. | 49(524) | |
| 5. | 50(621) | |
| 6. | 51(489) | |
| 7. | 52(620) | |
| 8. | 53(470) | |
| 9. | 54(538) | ಕಾಲಾವಕಾಶ |
| 10. | 55(601) | ಕಾಲಾವಕಾಶ |
| 11. | 56(523) | |
| 12. | 57(579) | |
| 13. | 58(478) | ಗೈರು ಹಾಜರಿ |
| 14. | 59(570) | |
| 15. | 60(481) | |

ದಿನಾಂಕ:11.12.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IVರ 4ನೇ ಪಟ್ಟಿಯ ಒಟ್ಟು 158 ಪ್ರಶ್ನೆಗಳ ಪೈಕಿ 106 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ ಪ್ರಸ್ತಾವಗಳು

1. **ಶ್ರೀ ಮಂಜುನಾಥ್ ಭಂಡಾರಿ** ಅವರು ಉಡುಪಿ ಜಿಲ್ಲೆಯ ಕುಂದಾಪುರ ಬೈಂದೂರು ಭಾಗದಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ಬೆಂಗಳೂರು ಸೇರಿದಂತೆ ಹಲವು ನಗರಗಳಲ್ಲಿ 11 ವರ್ಷದೊಳಗಿನ ಮಕ್ಕಳು ಮಾದಕ ವ್ಯಸನಿಗಳಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ವಿಜಯಪುರದಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ನಿರ್ಧಾರವನ್ನು ಕೈಬಿಟ್ಟು ಸರ್ಕಾರಿ ಕಾಲೇಜನ್ನು ಸ್ಥಾಪಿಸುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಪಿ.ಹೆಚ್. ಪೂಜಾರ್** ಅವರು ಶಿಕ್ಷಣ ಇಲಾಖೆಯ ವಿವಿಧ ಯೋಜನೆಗಳಿಗೆ ಮೀಸಲಿರುವ ಹಣವನ್ನು ಬ್ಯಾಂಕುಗಳಲ್ಲಿ ಠೇವಣಿ ಇಟ್ಟು, ಅಧಿಕಾರಿಗಳು ನಿರ್ಲಕ್ಷ್ಯ ತೋರಿರುವುದರಿಂದ ಆರ್ಥಿಕ ನಷ್ಟ ಉಂಟಾಗಿರುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಸಿ.ಟಿ. ರವಿ** ಅವರು ರಾಜ್ಯದ ಪದವಿ ಕಾಲೇಜುಗಳಲ್ಲಿ ಯುಜಿಸಿ ಅರ್ಹತೆ ಇಲ್ಲದ ಅತಿಥಿ ಉಪನ್ಯಾಸಕರುಗಳಿಗೆ ಸೇವಾ ಭದ್ರತೆ ಒದಗಿಸುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಡಾ: ಧನಂಜಯ ಸರ್ಜಿ** ಅವರು ಸರ್ಕಾರವು ಬಂಧಿಖಾನೆಗಳ ಸುಧಾರಣೆ ಕುರಿತು ನೇಮಕ ಮಾಡಿರುವ ಸಮಿತಿಗಳ ವರದಿಗಳಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಡಿ.ಎಸ್. ಅರುಣ್** ಅವರು ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಕೃಷಿ ಕಚೇರಿಗಳಲ್ಲಿ ಅಗತ್ಯವಿರುವ ತಾಂತ್ರಿಕ ಸಿಬ್ಬಂದಿ, ಕೃಷಿ ಸಹಾಯಕ ಹಾಗೂ ಕೃಷಿ ವಿಜ್ಞಾನಿಗಳ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕೃಷಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ವೈ.ಎಂ. ಸತೀಶ್** ಅವರು ಜೈನ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಚಿಕ್ಕೋಡಿ ಪಟ್ಟಣದಲ್ಲಿ ಜೈನ ಸಮುದಾಯದ ಹಿತರಕ್ಷಣಾ ಒಕ್ಕೂಟದಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ** ಅವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪೊಲೀಸ್ ವಿಭಾಗದಲ್ಲಿ ಗೋ ರಕ್ಷಣಾ ಪಡೆಯನ್ನು ರಚಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

## 3. ಶೂನ್ಯವೇಳೆ ಪ್ರಸ್ತಾವಗಳಿಗೆ ಉತ್ತರ

1. **ಶ್ರೀ ರಮೇಶ್ ಬಾಬು** ಅವರು ಬಿಬಿಎಂಪಿ ವ್ಯಾಪ್ತಿಯ ಮೈಸೂರು ಬ್ಯಾಂಕ್ ಬಳಿ ಕೆಂಪೇಗೌಡ ರಸ್ತೆಯಲ್ಲಿರುವ ಪ್ರಭಾತ್ ಕಾಂಪ್ಲೆಕ್ಸ್ ವಾಣಿಜ್ಯ ಕಟ್ಟಡದಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದು, ಕೂಡಲೇ ಕ್ರಮಕೈಗೊಂಡು ನಿಯಂತ್ರಿಸುವ ಕುರಿತು ದಿನಾಂಕ:08.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಪಿ.ಹೆಚ್. ಪೂಜಾರ್** ಅವರು ನೇಕಾರರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರ ನೀಡುವ ಕುರಿತು ದಿನಾಂಕ:09.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) ಹಾಗೂ ಶ್ರೀ ಶರವಣ ಟಿ.ಎ** ಅವರುಗಳು ಕಲಬುರಗಿಯಲ್ಲಿ ಪಿ.ಎಂ ಮಿತ್ರ ಮೆಗಾ ಜವಳಿ ಪಾರ್ಕ್ ಯೋಜನೆ ಆರಂಭಿಸುವ ಕುರಿತು ದಿನಾಂಕ:09.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಡಾ: ಎಂ.ಜಿ. ಮುಳೆ** ಅವರು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಮೂಲಸೌಕರ್ಯಗಳನ್ನು ಒದಗಿಸುವ ಕುರಿತು ದಿನಾಂಕ:09.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 4. ಸದನ ಸಮಿತಿಗಳ ಕಾಲಾವಕಾಶವನ್ನು ವಿಸ್ತರಿಸಲು ಪ್ರಸ್ತಾವ

1. **ಶ್ರೀ ಎಸ್.ವ್ಹಿ. ಸಂಕನೂರ (ಅಧ್ಯಕ್ಷರು, ವಿಶೇಷ ಜಂಟಿ ಸದನ ಸಮಿತಿ) ಅವರು:-**

"ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು ದಿನಾಂಕ:14.07.2025ರಿಂದ 12 ತಿಂಗಳವರೆಗೆ ವಿಸ್ತರಿಸುವ ಪ್ರಸ್ತಾವವನ್ನು ಮಂಡಿಸಿದರು.

ಪ್ರಸ್ತಾವವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

2. **ಶ್ರೀ ಪುಟ್ಟಣ್ಣ (ಅಧ್ಯಕ್ಷರು, ವಿಶೇಷ ಸದನ ಸಮಿತಿ) ಅವರು:-**

"ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ, ಪ್ರೌಢ ಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿ ಹೊಂದಿದ ಶಿಕ್ಷಕರುಗಳು ಹಾಗೂ 10, 15, 20, 25 ಮತ್ತು 30 ವರ್ಷಗಳ ಕಾಲಬದ್ದ ವೇತನ ಮುಂಬಡ್ತಿ ಸೌಲಭ್ಯಗಳನ್ನು ಪಡೆದಿರುವ ಶಿಕ್ಷಕರುಗಳ ನಡುವಿನ ವೇತನ ತಾರತಮ್ಯವನ್ನು ಸರಿಪಡಿಸುವ ಕುರಿತು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಅವಧಿಯನ್ನು ದಿನಾಂಕ:02.12.2025ರಿಂದ 6 ತಿಂಗಳವರೆಗೆ ವಿಸ್ತರಿಸುವ ಪ್ರಸ್ತಾವವನ್ನು ಮಂಡಿಸಿದರು.

ಪ್ರಸ್ತಾವವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 5. ಗಮನ ಸೆಳೆಯುವ ಸೂಚನೆಗಳು

1. **ಶ್ರೀಯುತರುಗಳಾದ ಎಸ್.ವ್ಹಿ. ಸಂಕನೂರ, ಎಸ್.ಎಲ್. ಭೋಜೇಗೌಡ, ಪುಟ್ಟಣ್ಣ, ಶಶೀಲ್ ಜಿ. ನಮೋಶಿ, ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) ಹಾಗೂ ರಾಮೋಜಿಗೌಡ** ಅವರುಗಳು ರಾಜ್ಯ ಸರ್ಕಾರ ಇತ್ತೀಚೆಗೆ ಪದವಿ ಪೂರ್ವ ಹಂತಕ್ಕೆ ಸ್ವತಂತ್ರ ಅಸ್ತಿತ್ವಕ್ಕೆ ಧಕ್ಕೆ ತರುವ ರೀತಿಯಲ್ಲಿ ಹಲವಾರು ಸುತ್ತೋಲೆಗಳನ್ನು ಹೊರಡಿಸುತ್ತಿರುವ ಹಿನ್ನಲೆಯಲ್ಲಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಆತಂಕಕ್ಕೆ ಒಳಗಾಗಿರುವ ಕುರಿತು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಗಮನ ಸೆಳೆದರು.

ಮಧ್ಯಾಹ್ನ 1.51 ಗಂಟೆಯಲ್ಲಿ ಶ್ರೀ **ಎಸ್.ಎಲ್. ಭೋಜೇಗೌಡ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ನಿರಾಣಿ ಹಣಮಂತ್ ರುದ್ರಪ್ಪ
2. ಕೆ. ವಿವೇಕಾನಂದ

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಸ್ಪಷ್ಟೀಕರಣ ನೀಡಿದರು.

**2.** **ಶ್ರೀ ಐವನ್ ಡಿ'ಸೋಜಾ** ಅವರು ಕರಾವಳಿ ಕರ್ನಾಟಕ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇಲಾಖೆ ಕೈಗೊಂಡಿರುವ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಗಮನ ಸೆಳೆದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಉತ್ತರಿಸಿದರು.

ಮಧ್ಯಾಹ್ನ 2.15 ಗಂಟೆಗೆ ಸದನವನ್ನು ಮುಂದೂಡಿ, ಮಧ್ಯಾಹ್ನ 3.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಎಸ್.ಎಲ್. ಭೋಜೇಗೌಡ**) ಪ್ರಕಟಿಸಿದರು.

ಸದನವು ಮಧ್ಯಾಹ್ನ 3.45 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## ಗಮನ ಸೆಳೆಯುವ ಸೂಚನೆಗಳು

**3.** **ಶ್ರೀ ತಿಪ್ಪಣ್ಣಪ ಕಮಕನೂರ** ಅವರು ರಾಜ್ಯ ಸರ್ಕಾರವು ನಿಜಶರಣ ಅಂಬಿಗರ ಚೌಡಯ್ಯರವರ ಪ್ರತಿಮೆಯನ್ನು ಸ್ಥಾಪಿಸಲು ವಿಳಂಬ ನೀತಿ ಅನುಸರಿಸುತ್ತಿರುವ ಕುರಿತು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಡಾ: ತಳವಾರ್ ಸಾಬಣ್ಣ
2. ಪುಟ್ಟಣ್ಣ
3. ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)
4. ಅಡಗೂರ್ ಹೆಚ್. ವಿಶ್ವನಾಥ್
5. ಶಿವಕುಮಾರ್ ಕೆ.
6. ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
7. ಎಂ. ನಾಗರಾಜು

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಸ್ಪಷ್ಟೀಕರಣ ನೀಡಿದರು.

4. **ಡಾ: ಕೆ. ಗೋವಿಂದರಾಜ್** ಅವರು ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಬೆಂಗಳೂರು ಪೊಲೀಸ್ ಕಮಿಷನರೇಟ್‌ನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಿ, ಪ್ರಸ್ತುತ ಇರುವ ಪೊಲೀಸ್ ಆಯುಕ್ತರ ಜೊತೆಗೆ ಮತ್ತೊಂದು ಪೊಲೀಸ್ ಆಯುಕ್ತರು ಹಾಗೂ ಪೊಲೀಸ್ ಅಧಿಕಾರಿ/ಸಿಬ್ಬಂದಿ ಹುದ್ದೆಗಳನ್ನು ಹೊಸದಾಗಿ ಸೃಜಿಸುವ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆದರು.

ಮಾನ್ಯ ಗೃಹ ಸಚಿವರು ಉತ್ತರಿಸಿದರು.

ಮಧ್ಯಾಹ್ನ 4.25 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಶರವಣ ಟಿ.ಎ
2. ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

ಮಾನ್ಯ ಗೃಹ ಸಚಿವರು ಸ್ಪಷ್ಟೀಕರಣ ನೀಡಿದರು.

5. **ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ** ಅವರು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಿಂದ ಬಾಧಿತರಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಾನ್ ಯು.ಜಿ.ಸಿ ಅತಿಥಿ ಉಪನ್ಯಾಸಕರುಗಳಿಗೆ ಸೇವಾ ಭದ್ರತೆ ಕಲ್ಪಿಸಲು ಕಾನೂನು ರೂಪಿಸುವ ಕುರಿತು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಮತಿ/ಶ್ರೀಯುತರುಗಳಾದ:

1. ಎಸ್.ಎಲ್. ಭೋಜೇಗೌಡ
2. ಎಸ್.ವ್ಹಿ. ಸಂಕನೂರ
3. ಹೇಮಲತಾ ನಾಯಕ
4. ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
5. ಡಾ: ಧನಂಜಯ ಸರ್ಜಿ
6. ರಮೇಶ್ ಬಾಬು
7. ಸಿ.ಟಿ. ರವಿ
8. ನಿರಾಣಿ ಹಣಮಂತ್ ರುದ್ರಪ್ಪ
9. ಡಾ: ತಳವಾರ್ ಸಾಬಣ್ಣ
10. ಕೆ. ವಿವೇಕಾನಂದ

ಮಾನ್ಯ ಉನ್ನತ ಶಿಕ್ಷಣ ಸಚಿವರು ಸ್ಪಷ್ಟೀಕರಣ ನೀಡಿದರು.

## 6. ನಿಯಮ 330ರ ಮೇರೆಗೆ

1. **ಶ್ರೀಮತಿ ಹೇಮಲತಾ ನಾಯಕ** ಅವರು ಕೊಪ್ಪಳ ನಗರದ ಸುತ್ತಮುತ್ತಲಿನ ಪರಿಸರ ಮತ್ತು ಜನ-ಜಾನುವಾರುಗಳ ಹಿತದೃಷ್ಟಿಯಿಂದ ಬಲ್ಡೋಟಾ ಸಮೂಹದ ಹೊಸ ಇಂಟಿಗ್ರೇಟೆಡ್ ಸ್ಟೀಲ್ ಪ್ಲಾಂಟ್ ಕಾರ್ಖಾನೆಯ ತೆರೆಯುವಿಕೆಯನ್ನು ನಿರ್ಬಂಧಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಉತ್ತರಿಸಿದರು.

ಸಂಜೆ 6.00 ಗಂಟೆಯಲ್ಲಿ **ಶ್ರೀ ಮಂಜುನಾಥ್ ಭಂಡಾರಿ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

ಮಾನ್ಯ ಶಾಸಕರಾದ ಶ್ರೀ ವೈ.ಎಂ. ಸತೀಶ್ ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಸ್ಪಷ್ಟೀಕರಣ ನೀಡಿದರು.

2. **ಶ್ರೀ ಕೇಶವ ಪ್ರಸಾದ್ ಎಸ್.** ಅವರು ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಪರಂಪರಾಗತ ನೇಕಾರಿಕೆಯೊಡನೆ ಆಧುನಿಕ ವಿದ್ಯುತ್ ಚಾಲಿತ ಮಗ್ಗಗಳು ಚಾಲನೆಯಲ್ಲಿದ್ದು, ನೇಕಾರರ ಬದುಕು ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರೋಪಾಯಗಳ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.
ಶ್ರೀಯುತರುಗಳಾದ:

1. ಕೆ.ಎಸ್. ನವೀನ್
2. ರಮೇಶ್ ಬಾಬು

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಉತ್ತರಿಸಿದರು.

ಸಂಜೆ 6.40 ಗಂಟೆಗೆ ಸದನವನ್ನು ಮುಂದೂಡಿ, ದಿನಾಂಕ: 12.12.2025ರಂದು ಬೆಳಗ್ಗೆ 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಮಂಜುನಾಥ್ ಭಂಡಾರಿ**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**

**ಕಾರ್ಯದರ್ಶಿ**

****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೇಳನೆಯ ಅಧಿವೇಶನ
ಲಘು ಪ್ರಕಟಣೆ ಭಾಗ–1
ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ
ಶುಕ್ರವಾರ, ದಿನಾಂಕ:12.12.2025
**(05)**

ದಿನಾಂಕ:12.12.2025 ರಂದು ಬೆಳಗ್ಗೆ 10.15 ಗಂಟೆಗೆ ಸದನವು ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:12.12.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–Vರ 5ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 61(751) | |
| 2. | 62(773) | |
| 3. | 63(638) | |
| 4. | 64(738) | |
| 5. | 65(746) | ಕಾಲಾವಕಾಶ |
| 6. | 66(792) | |
| 7. | 67(796) | |
| 8. | 68(676) | |
| 9. | 69(666) | |
| 10. | 70(672) | |
| 11. | 71(708) | |
| 12. | 72(692) | |
| 13. | 73(658) | ಗೈರು ಹಾಜರಿ |
| 14. | 74(716) | |
| 15. | 75(656) | ಗೈರು ಹಾಜರಿ |

ದಿನಾಂಕ:12.12.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–Vರ 5ನೇ ಪಟ್ಟಿಯ ಒಟ್ಟು 155 ಪ್ರಶ್ನೆಗಳ ಪೈಕಿ 81 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ ಪ್ರಸ್ತಾವಗಳು

1. **ಶ್ರೀಮತಿ ಬಲ್ಕೀಸ್ ಬಾನು** ಅವರು ಅಡಿಕೆ, ಎಲೆಚುಕ್ಕಿ ರೋಗ ನಿಯಂತ್ರಣಕ್ಕೆ ಪರಿಹಾರ ಹಾಗೂ ಇದರಿಂದಾಗಿ ಆಗಿರುವ ನಷ್ಟ ಮುಂತಾದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ತಂಡ ರಚಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

ಬೆಳಗ್ಗೆ 11.45 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿ ಪೀಠದಲ್ಲಿ ಆಸೀನರಾದರು.

2. **ಶ್ರೀ ಪಿ.ಹೆಚ್. ಪೂಜಾರ್** ಅವರು ವಿಶ್ವ ಪರಂಪರೆ ತಾಣ ಪಟ್ಟದಕಲ್ಲು ಸ್ಮಾರಕ ವೀಕ್ಷಿಸಲು ಬರುವ ಪ್ರವಾಸಿಗರ ವಾಹನಗಳಿಗೆ ಹೆಚ್ಚಿನ ಹಣ ವಸೂಲಿ ಮಾಡಲಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಜಗದೇವ್ ಗುತ್ತೇದಾರ್ ಮತ್ತು ಶ್ರೀ ಎಂ. ನಾಗರಾಜು** ಅವರುಗಳು ರಾಜ್ಯದಲ್ಲಿರುವ ಅಂಗನವಾಡಿಗಳಲ್ಲಿರುವ ಮೂಲಭೂತ ಸೌಕರ್ಯ, ಸಿಬ್ಬಂದಿ ಕೊರತೆ ಆಹಾರ ವಿತರಣೆ ಸಮಸ್ಯೆ ಇವುಗಳ ಶಾಶ್ವತ ಪರಿಹಾರಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಐವನ್ ಡಿ'ಸೋಜಾ** ಅವರು ಬೆಳಗಾವಿ ಕ್ಯಾಥೋಲಿಕ್ ಧರ್ಮ ಪ್ರಾಂತ್ಯದ ಗದಗ ಜಿಲ್ಲೆಯ ಗಜೇಂದ್ರಗಡ ತಾಲ್ಲೂಕಿನಲ್ಲಿ ಧರ್ಮ ಗುರುಗಳ ನಿವಾಸ ಹಾಗೂ ಪ್ರಾರ್ಥನಾ ಮಂದಿರ ಸ್ಥಾಪಿಸಲು ಅಡ್ಡಿಯಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ಕಲಬುರಗಿ ಜಿಲ್ಲೆ ಚಿಂಚೋಳಿಯಲ್ಲಿ ಹಾದುಹೋಗಿರುವ ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀಮತಿ ಹೇಮಲತಾ ನಾಯಕ** ಅವರು ಕೊಪ್ಪಳ ಜಿಲ್ಲೆಯ ಕನಕಗಿರಿ, ಬಂಕಾಪುರ ಹಾಗೂ ಕರಡಿಗುಡ್ಡ ಪ್ರದೇಶಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವುದನ್ನು ಕಾನೂನಾತ್ಮಕವಾಗಿ ಕ್ರಮಕೈಗೊಂಡಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ರಮೇಶ್ ಬಾಬು** ಅವರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಚೇರಿಯಲ್ಲಿ ಅಕ್ರಮವಾಗಿ ಸುಮಾರು 300ಕ್ಕೂ ಹೆಚ್ಚು ಸಾಗುವಳಿ ಚೀಟಿಗಳನ್ನು ನೀಡಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

8. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಸರ್ಕಾರಿ ಶಾಲೆಗಳಲ್ಲಿ ಲ್ಯಾಪ್‌ಟಾಪ್, ಡೆಸ್ಕ್‌ಟಾಪ್, ಪ್ರೊಜೆಕ್ಟರ್ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)** ಅವರು ಕೊಡಗು ಜಿಲ್ಲೆ, ಸೋಮವಾರ ಪೇಟೆ ತಾಲ್ಲೂಕು, ಕೊಡ್ಲಿಪೇಟೆಯ ಕ್ಯಾತೆ ಗ್ರಾಮದಲ್ಲಿರುವ ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ಅಲ್ಪಸಂಖ್ಯಾತ ವಸತಿ ಶಾಲೆಯ ಅವ್ಯವಸ್ಥೆ ಕುರಿತು ಪ್ರಸ್ತಾಪಿಸಿದರು.

ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಕಿಶೋರ್ ಕುಮಾರ್ ಪುತ್ತೂರ್** ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿರುವ ನಿವೇಶನ ಮತ್ತು ಕಟ್ಟಡಗಳಿಗೆ ಆನ್‌ಲೈನ್ ಮೂಲಕ ಖಾತಾಪತ್ರ ವಿತರಿಸಲು ಅಭಿವೃದ್ಧಿಪಡಿಸಿರುವ ಇ–ಸ್ವತ್ತು 2.0 ತಂತ್ರಾಂಶದ ಲೋಪದೋಷಗಳನ್ನು ಸರಿಪಡಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ಶೂನ್ಯವೇಳೆ ಪ್ರಸ್ತಾವಗಳಿಗೆ ಉತ್ತರ

1. **ಶ್ರೀಮತಿ ಭಾರತಿ ಶೆಟ್ಟಿ** ಅವರು ವಿದೇಶಿ ನಾಯಿಗಳನ್ನು ನಮ್ಮ ರಾಜ್ಯದಲ್ಲಿ ಸಾಕುವುದನ್ನು ಪ್ರತಿಬಂಧಿಸಲು ಅಗತ್ಯ ಕಾನೂನು ನಿಯಮಗಳನ್ನು ರಚಿಸುವ ಕುರಿತು ದಿನಾಂಕ:09.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ಕೃಷ್ಣಾ ನದಿ, ಭೀಮಾ ನದಿ ಹಾಗೂ ಕಾಗಿಣ ನದಿ ಹರಿಯುವ ಬಾಗಲಕೋಟೆ, ರಾಯಚೂರು ಜಿಲ್ಲೆಗಳಲ್ಲಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕುರಿತು ದಿನಾಂಕ:09.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಡಾ: ತಳವಾರ್ ಸಾಬಣ್ಣ** ಅವರು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವ ಕುರಿತು ದಿನಾಂಕ:10.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ಮಂಜುನಾಥ್ ಭಂಡಾರಿ** ಅವರು ಉಡುಪಿ ಜಿಲ್ಲೆಯ ಕುಂದಾಪುರ ಬೈಂದೂರು ಭಾಗದಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸುವ ಕುರಿತು ದಿನಾಂಕ:11.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ವಿಜಯಪುರದಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ನಿರ್ಧಾರವನ್ನು ಕೈಬಿಟ್ಟು ಸರ್ಕಾರಿ ಕಾಲೇಜನ್ನು ಸ್ಥಾಪಿಸುವ ಕುರಿತು ದಿನಾಂಕ:11.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 4. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ

**ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್ ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ಸಿ.ಟಿ. ರವಿ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಶರವಣ ಟಿ.ಎ ಹಾಗೂ ಇತರರು** ರಾಜ್ಯದಲ್ಲಿ ಕೃಷಿ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಪಡಿಸುವುದು ಹಾಗೂ ನಾಶಗೊಂಡ ಬೆಳೆಗಳಿಗೆ ಪರಿಹಾರ ಒದಗಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ವಿಷಯದ ಕುರಿತು ಚರ್ಚೆ.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

3. ಕೆ.ಎಸ್. ನವೀನ್
4. ಕೇಶವ ಪ್ರಸಾದ್ ಎಸ್
5. ವೈ.ಎಂ. ಸತೀಶ್

ಮಧ್ಯಾಹ್ನ 1.20 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:15.12.2025ರಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೇಳನೆಯ ಅಧಿವೇಶನ
ಲಘು ಪ್ರಕಟಣೆ ಭಾಗ–1
ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ
ಸೋಮವಾರ, ದಿನಾಂಕ:15.12.2025

**(06)**

ದಿನಾಂಕ:15.12.2025 ರಂದು ಬೆಳಗ್ಗೆ 11.05 ಗಂಟೆಗೆ ಸದನವು ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಸಂತಾಪ ಸೂಚನೆ

ವಿಧಾನಸಭೆಯ ಮಾನ್ಯ ಶಾಸಕರಾದ ಶಾಮನೂರು ಶಿವಶಂಕರಪ್ಪ ಅವರು ದಿನಾಂಕ:14.12.2025ರಂದು ನಿಧನರಾದುದಕ್ಕೆ ಸಂತಾಪ ಸೂಚನಾ ನಿರ್ಣಯ ಮಂಡಿಸಲಾಯಿತು.

ಮಾನ್ಯ ಸಭಾನಾಯಕರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಶ್ರೀಯುತರುಗಳಾದ:

1. ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
2. ಎಸ್.ಎಲ್. ಭೋಜೇಗೌಡ
3. ಸಿ.ಟಿ. ರವಿ
4. ಐವನ್ ಡಿ'ಸೋಜಾ
5. ಪ್ರದೀಪ್ ಶೆಟ್ಟರ್
6. ಕೆ.ಜೆ. ಜಾರ್ಜ್, ಮಾನ್ಯ ಇಂಧನ ಸಚಿವರು
7. ಎಂ. ನಾಗರಾಜು
8. ಪಿ.ಹೆಚ್. ಪೂಜಾರ್
9. ಡಾ: ಎಂ.ಸಿ. ಸುಧಾಕರ್, ಮಾನ್ಯ ಉನ್ನತ ಶಿಕ್ಷಣ ಸಚಿವರು

10. ಕೆ.ಹೆಚ್. ಮುನಿಯಪ್ಪ, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು
11. ಮಂಜುನಾಥ್ ಭಂಡಾರಿ

ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಮೃತ ಗಣ್ಯರ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

ಮಧ್ಯಾಹ್ನ 12.08 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

ಸದನವು ಮಧ್ಯಾಹ್ನ 12.17 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಶ್ರೀ ಎಸ್.ಎಲ್. ಭೋಜೇಗೌಡ ಅವರು ಹಾಲಿ ಶಾಸಕರು (ವಿಧಾನಸಭೆ) ಹಿರಿಯ ಸದಸ್ಯರಾಗಿದ್ದು ಅವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಇರಿಸಲಾಗಿದ್ದು, ಮಾನ್ಯ ಶಾಸಕರು ಅಂತಿಮ ದರ್ಶನಕ್ಕೆ ಹೋಗಲು ಅವಕಾಶ ನೀಡುವ ನಿಟ್ಟಿನಲ್ಲಿ ಇಂದಿನ ಕಾರ್ಯಕಲಾಪದ ವಿಷಯಗಳನ್ನು ನಾಳೆಗೆ ತೆಗೆದುಕೊಳ್ಳುವ ಮೂಲಕ ಅವಕಾಶ ನೀಡಿ ಕಲಾಪವನ್ನು ಮುಂದೂಡಬೇಕೆಂದು ಪ್ರಸ್ತಾಪಿಸಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಸದರಿ ಪ್ರಸ್ತಾವಕ್ಕೆ ಸಹಮತಿ ಇದೆ ಎಂದು ತಿಳಿಸುತ್ತಾ, ಸರ್ಕಾರ ಸೂಕ್ತ ನಿರ್ಧಾರವನ್ನು ಕೈಗೊಳ್ಳಬೇಕೆಂದು ಕೋರಿದರು.

ಮಾನ್ಯ ಸಭಾನಾಯಕರು ಸಹ ಇಂದಿನ ಕಲಾಪಗಳನ್ನು ನಾಳೆಗೆ ಮುಂದೂಡಲು ಸಹಮತಿಸಿದರು. ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಇಂದಿನ ಕಾರ್ಯಕಲಾಪಗಳನ್ನು ನಾಳೆಯ ಉಪವೇಶನದಲ್ಲಿ ಸೇರಿಸಬೇಕೆಂದು ಕೋರಿದರು.

ದಿನಾಂಕ:15.12.2025ರ ಪ್ರಶ್ನೆಗಳು ಹಾಗೂ ಶೂನ್ಯವೇಳೆ ಪ್ರಸ್ತಾವಗಳನ್ನು ನಾಳೆ ತೆಗೆದುಕೊಳ್ಳುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

ಮಧ್ಯಾಹ್ನ 12.20 ಗಂಟೆಗೆ ಸದನವನ್ನು ಮುಂದೂಡಿ, ದಿನಾಂಕ:16.12.2025ರಂದು ಬೆಳಗ್ಗೆ 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ**

****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೇಳನೆಯ ಅಧಿವೇಶನ

ಲಘು ಪ್ರಕಟಣೆ ಭಾಗ – 1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಮಂಗಳವಾರ, ದಿನಾಂಕ:16.12.2025

**(07)**

ದಿನಾಂಕ:16.12.2025 ರಂದು ಬೆಳಗ್ಗೆ 10.07 ಗಂಟೆಗೆ ಸದನವು ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:15.12.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–Iರ 6ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 76(884) | |
| 2. | 77(895) | |
| 3. | 78(810) | |
| 4. | 79(943) | ಡಾ: ಆರತಿ ಕೃಷ್ಣ ಪರವಾಗಿ ಶ್ರೀ ಮಂಜುನಾಥ್ ಭಂಡಾರಿ |
| 5. | 80(986) | |
| 6. | 81(835) | |
| 7. | 82(1013) | ಗೈರು ಹಾಜರಿ |
| 8. | 83(841) | |
| 9. | 84(851) | |
| 10. | 85(881) | |
| 11. | 86(855) | ಕಾಲಾವಕಾಶ |
| 12. | 87(870) | |
| 13. | 88(890) | |
| 14. | 89(954) | |
| 15. | 90(865) | |

ದಿನಾಂಕ:16.12.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IIರ 7ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 91(1097)
2. 92(1075)
3. 93(1128)
4. 94(1087)
5. 95(1083)
6. 96(1137) ಗೈರು ಹಾಜರಿ
7. 97(1154)
8. 98(1095)
9. 99(1063)

ಬೆಳಗ್ಗೆ 11.57 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

10. 100(1068)
11. 101(1020)

ಮಧ್ಯಾಹ್ನ 12.09 ಗಂಟೆಯಲ್ಲಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

12. 102(1110)
13. 103(1140)
14. 104(1106) ಗೈರು ಹಾಜರಿ
15. 105(1159)

**ದಿನಾಂಕ:08.12.2025ರ ಸಮೂಹ–Iರ 1ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 7(148)

ದಿನಾಂಕ:15.12.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–Iರ 6ನೇ ಪಟ್ಟಿಯ ಒಟ್ಟು 193 ಪ್ರಶ್ನೆಗಳ ಪೈಕಿ 93 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ದಿನಾಂಕ:16.12.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIರ 7ನೇ ಪಟ್ಟಿಯ ಒಟ್ಟು 126 ಪ್ರಶ್ನೆಗಳ ಪೈಕಿ 41 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ ಪ್ರಸ್ತಾವಗಳು

1. **ಶ್ರೀ ಮಂಜುನಾಥ್ ಭಂಡಾರಿ** ಅವರು ಮಂಗಳೂರಿನ ಮೂಡುಶೆಡ್ಡೆಯಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮತ್ತು ಕಿದ್ವಾಯಿ ಸ್ಮಾರಕ ಗ್ರಂಥಿ ಆಸ್ಪತ್ರೆಗಳ ಘಟಕಗಳನ್ನು ಸ್ಥಾಪಿಸುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

2. **ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿಹೊಳಿ** ಅವರು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹೆಸರನ್ನು ಬದಲಿಸಿ ರಾಣಿ ಚೆನ್ನಮ್ಮ ರಸ್ತೆ ಸಾರಿಗೆ ಸಂಸ್ಥೆ ಎಂದು ಮರುನಾಮಕರಣ ಮಾಡುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಗದಗ-ಬೆಟಗೇರಿ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀಮತಿ ಬಲ್ಕೀಸ್ ಬಾನು** ಅವರು ಸಫಾಯಿ ಕಾರ್ಮಿಕರಿಗೆ ಮೂಲಭೂತ ಸುರಕ್ಷತಾ ಸಾಮಗ್ರಿಗಳನ್ನು ಪೂರೈಸುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು.

5. **ಶ್ರೀ ಎಫ್.ಹೆಚ್. ಜಕ್ಕಪ್ಪನವರ್** ಅವರು ಸರ್ಕಾರಿ ಸೇವೆಯಲ್ಲಿನ ಹೊರಗುತ್ತಿಗೆ ಸೇವೆಯನ್ನು ರದ್ದುಪಡಿಸುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಐವನ್ ಡಿ'ಸೋಜಾ** ಅವರು ರಾಜ್ಯದಲ್ಲಿ ಶಾಲಾ ಶಿಕ್ಷಕರ ವರ್ಗಾವಣೆಯ ಕೌನ್ಸೆಲಿಂಗ್ ಮುಕ್ತಾಯಗೊಂಡಿದ್ದರೂ ಆದೇಶ ಹೊರಡಿಸಿ ಶಿಕ್ಷಕರನ್ನು ಬಿಡುಗಡೆಗೊಳಿಸದಿರುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

**7. ಶ್ರೀ ಡಿ.ಎಸ್. ಅರುಣ್** ಅವರು ಬೆಂಗಳೂರು ದಕ್ಷಿಣ ತಾಲ್ಲೂಕಿನ 7 ಸರ್ಕಾರಿ ಶಾಲೆಗಳನ್ನು ಕೆ.ಪಿ.ಎಸ್‌ನಲ್ಲಿ ವಿಲೀನಗೊಳಿಸುವಂತೆ ಆದೇಶ ಹೊರಡಿಸಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

**8. ಶ್ರೀ ಸಿ.ಟಿ. ರವಿ** ಅವರು ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಸಂಯೋಜಿತ ಕಾಲೇಜುಗಳಲ್ಲಿನ 400 ಎಂ.ಕಾಂ ವಿದ್ಯಾರ್ಥಿಗಳು ಅಂತಿಮ ಸೆಮಿಸ್ಟರ್‌ನಲ್ಲಿ ಅನುತ್ತೀರ್ಣರಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**9. ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ಅನ್ಯ ರಾಜ್ಯಗಳಿಂದ ಬರುವ ಗಾಂಜಾ ಕಲಬುರಗಿ ಮತ್ತು ಬೀದರ್‌ನಲ್ಲಿ ರಹಸ್ಯವಾಗಿ ಹಲವು ರೂಪಗಳಲ್ಲಿ ದಾಸ್ತಾನುಗೊಂಡು ಹೊರ ರಾಜ್ಯಗಳಿಗೆ ಪೂರೈಕೆಯಾಗುತ್ತಿದ್ದು, ಗಾಂಜಾ ಮಾಫಿಯಾ ನಿಯಂತ್ರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**10. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುದಾನ ಬಿಡುಗಡೆಯಾಗದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**11. ಶ್ರೀ ಶಶೀಲ್ ಜಿ. ನಮೋಶಿ** ಅವರು ಭಾರತ ಸೇವಾದಳ ಹಂಗಾಮಿ ನೌಕರರಿಗೆ 10 ತಿಂಗಳಿನಿಂದ ವೇತನ ಬಿಡುಗಡೆಯಾಗದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

**12. ಡಾ: ತಳವಾರ್ ಸಾಬಣ್ಣ** ಅವರು ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಿ, ವಿಶ್ವವಿದ್ಯಾಲಯಕ್ಕೆ 12ಬಿ ಮಾನ್ಯತೆ ದೊರಕಿಸಿಕೊಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**13. ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ** ಅವರು ಪರಿಶಿಷ್ಟ ಪಂಗಡಗಳಲ್ಲಿಯೂ ಒಳ ಮೀಸಲಾತಿ ಜಾರಿಗೆ ತರಲು ಆಯೋಗವನ್ನು ರಚಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

14. **ಡಾ: ಧನಂಜಯ ಸರ್ಜಿ ಮತ್ತು ಶ್ರೀ ಪ್ರದೀಪ್ ಶೆಟ್ಟರ್** ಅವರುಗಳು ಜನೌಷಧಿ ಕೇಂದ್ರಗಳನ್ನು ತೆರೆಯುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

15. **ಶ್ರೀಮತಿ ಭಾರತಿ ಶೆಟ್ಟಿ** ಅವರು ಬೆಂಗಳೂರು ರೈಲು ಕಂಟೋನ್ಮೆಂಟ್ ಪ್ರದೇಶದಲ್ಲಿರುವ 371ಕ್ಕೂ ಹೆಚ್ಚು ಮರಗಳನ್ನು ಸಂರಕ್ಷಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

16. **ಶ್ರೀ ರಮೇಶ್ ಬಾಬು** ಅವರು ಖಾಸಗಿ ಯೂಟ್ಯೂಬ್ ಚಾನಲ್‌ನಲ್ಲಿ **"ಮೊಟ್ಟೆ ಬಳಕೆ ಕ್ಯಾನ್ಸರ್‌ಗೆ ಅವಕಾಶವಾಗುತ್ತದೆ"** ಎಂದು ಸುದ್ದಿ ಪ್ರಕಟ ಮಾಡಿದ್ದು ಅವರ ಮೇಲೆ ಪ್ರಕರಣ ದಾಖಲಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

17. **ಶ್ರೀ ಚಿದಾನಂದ್ ಎಂ. ಗೌಡ** ಅವರು ಕೈಗಾರಿಕೆಗಳ ಸ್ಥಾಪನೆಗಾಗಿ ರೈತರಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು, ಅವರುಗಳಿಗೆ ಉದ್ಯೋಗಾವಕಾಶ ನೀಡದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಉತ್ತರಿಸಿದರು.

18. **ಶ್ರೀ ಪಿ.ಹೆಚ್. ಪೂಜಾರ್** ಅವರು ಹಿರಿಯ ನಾಗರೀಕರಿಗೆ ಲಭ್ಯವಿರುವ (ಸಿಗಬೇಕಾದ) ಸೌಲಭ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

19. **ಶ್ರೀ ಎಂ. ನಾಗರಾಜು** ಅವರು ಕಿತ್ತೂರು ತಾಲ್ಲೂಕಿಗೆ ಬಸ್ ಡಿಪೋ ವ್ಯವಸ್ಥೆ ಕಲ್ಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ಶೂನ್ಯವೇಳೆ ಪ್ರಸ್ತಾವಗಳಿಗೆ ಉತ್ತರ

1. **ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)** ಅವರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮಧ್ಯಮಾವಧಿ–ದೀರ್ಘಾವಧಿಗೆ ವಿತರಿಸುವ ಸಾಲಗಳಿಗೆ ನಿಗದಿಪಡಿಸಿರುವ ಬಡ್ಡಿದರ ಪರಿಷ್ಕರಿಸುವ ಕುರಿತು ದಿನಾಂಕ:10.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಜಗದೇವ್ ಗುತ್ತೇದಾರ್** ಅವರು ರಾಜ್ಯದಲ್ಲಿ ಸುಳ್ಳು ಪೋಕ್ಸೋ ಮೊಕದ್ದಮೆಗಳು ದಾಖಲಾಗುತ್ತಿರುವ ಕುರಿತು ದಿನಾಂಕ:10.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಸಿ.ಟಿ. ರವಿ** ಅವರು ರಾಜ್ಯದ ಪದವಿ ಕಾಲೇಜುಗಳಲ್ಲಿ ಯುಜಿಸಿ ಅರ್ಹತೆ ಇಲ್ಲದ ಅತಿಥಿ ಉಪನ್ಯಾಸಕರುಗಳಿಗೆ ಸೇವಾ ಭದ್ರತೆ ಒದಗಿಸುವ ಕುರಿತು ದಿನಾಂಕ:11.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀಮತಿ ಹೇಮಲತಾ ನಾಯಕ** ಅವರು ಕೊಪ್ಪಳ ಜಿಲ್ಲೆಯ ಕನಕಗಿರಿ, ಬಂಕಾಪುರ ಹಾಗೂ ಕರಡಿಗುಡ್ಡ ಪ್ರದೇಶಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವುದನ್ನು ಕಾನೂನಾತ್ಮಕವಾಗಿ ಕ್ರಮಕೈಗೊಂಡಿರುವ ಕುರಿತು ದಿನಾಂಕ:12.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಶ್ರೀ ರಮೇಶ್ ಬಾಬು** ಅವರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಚೇರಿಯಲ್ಲಿ ಅಕ್ರಮವಾಗಿ ಸುಮಾರು 300ಕ್ಕೂ ಹೆಚ್ಚು ಸಾಗುವಳಿ ಚೀಟಿಗಳನ್ನು ನೀಡಿರುವ ಕುರಿತು ದಿನಾಂಕ:12.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಸರ್ಕಾರಿ ಶಾಲೆಗಳಲ್ಲಿ ಲ್ಯಾಪ್‌ಟಾಪ್, ಡೆಸ್ಕ್‌ಟಾಪ್, ಪ್ರೊಜೆಕ್ಟರ್ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಕುರಿತು ದಿನಾಂಕ:12.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 4. ಹಕ್ಕುಚ್ಯುತಿ ಮಂಡನೆ

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)** ಅವರು ಕೊಡಗು ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯವರ ವಿರುದ್ಧ ಮಂಡಿಸಿದ ಹಕ್ಕುಚ್ಯುತಿಯನ್ನು ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಹಕ್ಕುಬಾಧ್ಯತಾ ಸಮಿತಿಯ ಪರಿಶೀಲನೆಗೆ ವಹಿಸಿದರು.

ಮಧ್ಯಾಹ್ನ 2.17 ಗಂಟೆಗೆ ಸದನವನ್ನು ಮುಂದೂಡಿ, ಮಧ್ಯಾಹ್ನ 3.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

ಸದನವು ಮಧ್ಯಾಹ್ನ 3.45 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 5. ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರವರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು **ದಿನಾಂಕ:16.12.2025ರಂದು ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ವಿಧೇಯಕ, 2025ನ್ನು ತಿದ್ದುಪಡಿಯೊಂದಿಗೆ** ಹಾಗೂ ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2025
2. ಕರ್ನಾಟಕ ಬಾಡಿಗೆ (ತಿದ್ದುಪಡಿ) ವಿಧೇಯಕ, 2025
3. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2025
4. ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
5. ಚಂದ್ರಗುತ್ತಿ ಶ್ರೀ ರೇಣುಕಾಂಬ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2025
6. ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2025
7. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ಎರಡನೇ ತಿದ್ದುಪಡಿ) ವಿಧೇಯಕ, 2025
8. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕ, 2025
9. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕ, 2025
10. ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 2025
11. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ, 2025

ಮಾನ್ಯ ವಿರೋಧ ಪಕ್ಷದ ನಾಯಕರು ಉತ್ತರ ಕರ್ನಾಟಕ ಭಾಗದ ಚರ್ಚೆಗೆ ಸಮಯದ ಅಭಾವವಿರುವುದರಿಂದ ಅಧಿವೇಶನವನ್ನು ಒಂದು ವಾರ ಮುಂದುವರೆಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಸಂಪುಟ ಸಭೆಯಲ್ಲಿ ಸಮಾಲೋಚಿಸುವುದಾಗಿ ತಿಳಿಸಿದರು.

## 6. ಗಮನ ಸೆಳೆಯುವ ಸೂಚನೆಗಳು

1. **ಡಾ: ಎಂ.ಜಿ. ಮುಳೆ** ಅವರು ಬಸವಕಲ್ಯಾಣದಲ್ಲಿರುವ ಐತಿಹಾಸಿಕ ಸ್ಮಾರಕಗಳ ನಿರ್ವಹಣೆ ಮತ್ತು ಉದ್ಯಾನವನಗಳ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆದರು.

   ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

2. **ಡಾ: ಯತೀಂದ್ರ ಎಸ್.** ಅವರು ಸಿವಿಲ್ ಗುತ್ತಿಗೆ ಕಾಮಗಾರಿಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ–1 ಮತ್ತು 2ಎ ಸಮುದಾಯಗಳಿಗೆ ರೂ.1.00 ಕೋಟಿಯವರೆಗೆ ಮೀಸಲಾತಿಯನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಫಲಾನುಭವಿಗಳಿಗೆ ಪ್ರತ್ಯೇಕ ಜಾತಿ ಪ್ರಮಾಣಪತ್ರ ಒದಗಿಸುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆದರು.

   ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

   ಮಾನ್ಯ ಶಾಸಕರಾದ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಸ್ಪಷ್ಟೀಕರಣ ಕೋರಿದರು.

   ಮಾನ್ಯ ಕಂದಾಯ ಸಚಿವರು ಸ್ಪಷ್ಟೀಕರಣ ನೀಡಿದರು.

3. **ಶ್ರೀ ಶಿವಕುಮಾರ್ ಕೆ.** ಅವರು ರಾಜ್ಯದಲ್ಲಿ ಹಲವು ದಶಕಗಳಿಂದ ಖಾಸಗಿ ಭೂಮಾಪಕರು ಅಧಿಕೃತವಾಗಿ ಭೂದಾಖಲೆಗಳ ಹಾಗೂ ಭೂಮಾಪನ ಇಲಾಖೆಯ ನಿಯಮಗಳಿಗನುಗುಣವಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳನ್ನು ಒಂದು ಬಾರಿಗೆ ವಿಶೇಷ ನೇಮಕಾತಿ ಉಪಕ್ರಮದಲ್ಲಿ ಸೇವಾನುಭವದ ಆಧಾರದಲ್ಲಿ ಖಾಲಿಯಿರುವ ಭೂಮಾಪಕರ ಹುದ್ದೆಗೆ ಭರ್ತಿ ಮಾಡಲು ಕ್ರಮವಹಿಸುವುದರ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆದರು.

   ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

4. **ಶ್ರೀಮತಿ ಭಾರತಿ ಶೆಟ್ಟಿ** ಅವರು ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಮಂಡಳಿಯ ವತಿಯಿಂದ ನೀಡುತ್ತಿರುವ ತರಬೇತಿಯ ಪಠ್ಯದಲ್ಲಿ ಟೈಲರಿಂಗ್ ಮತ್ತು ಪ್ಲಂಬಿಂಗ್‌ನ್ನು ಸೇರಿಸದೆ ಇರುವುದರಿಂದ ನಿರುದ್ಯೋಗಿಗಳಿಗೆ ತೊಂದರೆಯಾಗುತ್ತಿರುವುದು ಹಾಗೂ ಮಂಡಳಿಯಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆದರು.

   ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಉತ್ತರಿಸಿದರು.

   ಮಾನ್ಯ ಶಾಸಕರಾದ ಶ್ರೀಮತಿ ಬಲ್ಕೀಸ್ ಬಾನು ಅವರು ಸ್ಪಷ್ಟೀಕರಣ ಕೋರಿದರು.

   ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಸ್ಪಷ್ಟೀಕರಣ ನೀಡಿದರು.

5. **ಶ್ರೀ ಶರವಣ ಟಿ.ಎ** ಅವರು ಆಂಧ್ರಪ್ರದೇಶದ ತಿರುಮಲ ಬೆಟ್ಟದಲ್ಲಿ ನಿರ್ಮಿಸಲಾಗಿರುವ ಕರ್ನಾಟಕ ಭವನದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಯು ಅತ್ಯಂತ ಕಳಪೆ ಗುಣಮಟ್ಟದಿಂದ ಕೂಡಿರುವ ಕಾರಣ ಭಕ್ತಾದಿಗಳಿಗೆ ತೊಂದರೆಯಾಗುತ್ತಿರುವ ಕುರಿತು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆದರು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಉತ್ತರಿಸಿದರು.

ಮಾನ್ಯ ಶಾಸಕರಾದ ಶ್ರೀ ಕೆ.ಎಸ್. ನವೀನ್ ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಸ್ಪಷ್ಟೀಕರಣ ನೀಡಿದರು.

6. **ಶ್ರೀ ರಮೇಶ್ ಬಾಬು** ಅವರು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಪುರಸಭೆ ಮತ್ತು ಹುಳಿಯಾರು ಪಟ್ಟಣ ಪಂಚಾಯಿತಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗಿದ್ದರೂ ಕಾಮಗಾರಿಗಳನ್ನು ಪೂರ್ಣಗೊಳಿಸದೆ ಹಣ ದುರ್ಬಳಕೆಯಾಗಿರುವ ಕುರಿತು ಹಾಗೂ ಹುಳಿಯಾರು ಪಟ್ಟಣ ಪಂಚಾಯಿತಿಗೆ ಕಸ ವಿಲೇವಾರಿ ಮಾಡಲು ಸ್ಥಳ ನಿಗದಿಗೊಳಿಸದಿರುವ ಕುರಿತು ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಗಮನ ಸೆಳೆದರು.

ಸಂಜೆ 5.03 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಸಭಾಪತಿ ಪೀಠದಲ್ಲಿ ಆಸೀನರಾದರು.

ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಉತ್ತರಿಸಿದರು.

ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಸ್ಪಷ್ಟೀಕರಣ ನೀಡಿದರು.

## 7. ನಿಯಮ 330ರ ಮೇರೆಗೆ

1. **ಶ್ರೀಯುತರುಗಳಾದ ಎಸ್.ಎಲ್. ಭೋಜೇಗೌಡ, ಪುಟ್ಟಣ್ಣ, ಶಶೀಲ್ ಜಿ. ನಮೋಶಿ ಮತ್ತು ಎಸ್.ವ್ಹಿ. ಸಂಕನೂರ, ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) ಹಾಗೂ ರಾಮೋಜಿಗೌಡ** ಅವರುಗಳು ಸರ್ಕಾರಿ ಶಾಲೆ/ಅನುದಾನಿತ/ಅನುದಾನ ರಹಿತ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳು ಕಾಲ ಕಾಲಕ್ಕೆ ಸಿಗಬೇಕಾದ ಬಡ್ತಿಯಿಂದ ವಂಚಿತರಾಗಿರುವುದನ್ನೊಳಗೊಂಡಂತೆ ಇನ್ನಿತರೆ ಸೌಲಭ್ಯಗಳು ದೊರಕದೆ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿರುವ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಮತಿ/ಶ್ರೀಯುತರುಗಳಾದ:

1. ಪುಟ್ಟಣ್ಣ
2. ಎಸ್.ವ್ಹಿ. ಸಂಕನೂರ
3. ಶಶೀಲ್ ಜಿ. ನಮೋಶಿ
4. ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)
5. ರಾಮೋಜಿಗೌಡ
6. ಹೇಮಲತಾ ನಾಯಕ
7. ನಿರಾಣಿ ಹಣಮಂತ್ ರುದ್ರಪ್ಪ

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರಿಸಿದರು.

2. **ಶ್ರೀಯುತರುಗಳಾದ ಪ್ರತಾಪ್ ಸಿಂಹ ನಾಯಕ್ ಕೆ, ಡಾ: ತಳವಾರ್ ಸಾಬಣ್ಣ, ಶಾಂತಾರಾಮ್ ಬುಡ್ನ ಸಿದ್ದಿ ಮತ್ತು ಡಾ: ಧನಂಜಯ ಸರ್ಜಿ** ಅವರುಗಳು ರಬ್ಬರ್ ಬೆಳೆಗಾರರು ತೀವ್ರ ಸಂಕಷ್ಟದಲ್ಲಿದ್ದು, ಸದರಿ ರೈತರುಗಳಿಗೆ ಅನುಕೂಲವಾಗುವ ರೀತ್ಯಾ ಸದರಿ ಕೃಷಿಯನ್ನು ವಾಣಿಜ್ಯ ಬೆಳೆಯೆಂದು ಪರಿಗಣಿಸುವುದರ ಬದಲಿಗೆ ಕೃಷಿ ಬೆಳೆಯೆಂದು ಪರಿಗಣಿಸುವುದು, ರಬ್ಬರ್ ಕೃಷಿಯನ್ನು ವಿಮಾ ಸೌಲಭ್ಯಕ್ಕೆ ಒಳಪಡಿಸುವುದು ಹಾಗೂ ರಬ್ಬರ್ ಆಮದಿನ ಸುಂಕವನ್ನು ಗರಿಷ್ಠ ಪ್ರಮಾಣಕ್ಕೆ ನಿಗದಿಪಡಿಸುವುದರ ಮೂಲಕ ರಬ್ಬರ್ ಬೆಳೆಗಾರರ ಸಂಕಷ್ಟವನ್ನು ನೀಗಿಸುವ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

1. ಡಾ: ತಳವಾರ್ ಸಾಬಣ್ಣ
2. ಡಾ: ಧನಂಜಯ ಸರ್ಜಿ

ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಪರವಾಗಿ ಮಾನ್ಯ ಕಾರ್ಮಿಕ ಸಚಿವರು ಉತ್ತರಿಸಿದರು.

ಸಂಜೆ 6.41 ಗಂಟೆಗೆ ಸದನವನ್ನು ಮುಂದೂಡಿ, ದಿನಾಂಕ:17.12.2025ರಂದು ಬೆಳಗ್ಗೆ 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

****

**ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತೇಳನೆಯ ಅಧಿವೇಶನ
ಲಘು ಪ್ರಕಟಣೆ ಭಾಗ–1
ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ
ಬುಧವಾರ, ದಿನಾಂಕ:17.12.2025
**(08)**

ದಿನಾಂಕ:17.12.2025 ರಂದು ಬೆಳಗ್ಗೆ 10.28 ಗಂಟೆಗೆ ಸದನವು ಮಾನ್ಯ ಉಪ ಸಭಾಪತಿಯವರ **(ಶ್ರೀ ಎಂ.ಕೆ. ಪ್ರಾಣೇಶ್)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಮಾನ್ಯ ಶಾಸಕರು ಮಂಡಿಸಿರುವ ಹಕ್ಕುಚ್ಯುತಿ ಸೂಚನೆಗೆ ಸಂಬಂಧಿಸಿದಂತೆ ಇಲಾಖೆಯಿಂದ ಕೈಗೊಂಡಿರುವ ಕ್ರಮದ ಕುರಿತು ಮಾಹಿತಿ ಒದಗಿಸುವಂತೆ ಮಾನ್ಯ ವಿರೋಧ ಪಕ್ಷದ ಶಾಸಕರುಗಳು ಒತ್ತಾಯಿಸಿದರು.

ಮಾನ್ಯ ಶಾಸಕರು ನೀಡಿರುವ ಸೂಚನೆಗೆ ಕೂಡಲೇ ಕ್ರಮವಹಿಸಿ ಈ ದಿನವೇ ಸದನಕ್ಕೆ ಮಾಹಿತಿ ನೀಡಬೇಕೆಂದು ಪೀಠದಿಂದ ಆದೇಶ ನೀಡಲಾಯಿತು.

ಮಾನ್ಯ ಸಚಿವರು ಉಪವೇಶನದಲ್ಲಿ ಹಾಜರಿಲ್ಲದಿರುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಪ್ರಸ್ತಾಪಿಸಿದರು.

**"ಗದ್ದಲ"**

ಬೆಳಗ್ಗೆ 10.38 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಉಪ ಸಭಾಪತಿಯವರು **(ಶ್ರೀ ಎಂ.ಕೆ. ಪ್ರಾಣೇಶ್)** ಪ್ರಕಟಿಸಿದರು.

ಸದನವು ಬೆಳಗ್ಗೆ 11.22 ಗಂಟೆಗೆ ಮಾನ್ಯ ಉಪ ಸಭಾಪತಿಯವರ **(ಶ್ರೀ ಎಂ.ಕೆ. ಪ್ರಾಣೇಶ್)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**"ಗದ್ದಲ"**

## 1. ಪ್ರಶ್ನೋತ್ತರ

ದಿನಾಂಕ:17.12.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IIIರ 8ನೇ ಪಟ್ಟಿಯ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 106(1246) | |
| 2. | 107(1193) | |
| 3. | 108(1162) | |
| 4. | 109(1242) | |
| 5. | 110(1332) | ಗೈರು ಹಾಜರಿ |
| 6. | 111(1263) | |
| 7. | 112(1289) | |
| 8. | 113(1300) | |
| 9. | 114(1251) | |
| 10. | 115(1336) | |
| 11. | 116(1234) | ತಡೆಹಿಡಿಯಲಾಯಿತು |
| 12. | 117(1202) | |
| 13. | 118(1267) | |
| 14. | 119(1201) | |
| 15. | 120(1185) | |

ದಿನಾಂಕ:17.12.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIIರ 8ನೇ ಪಟ್ಟಿಯ ಒಟ್ಟು 160 ಪ್ರಶ್ನೆಗಳ ಪೈಕಿ 64 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ ಪ್ರಸ್ತಾವಗಳು

1. **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ** ಅವರು ರಾಜ್ಯದಲ್ಲಿರುವ ವಿಕಲಚೇತನರಿಗೆ ಮಾಸಾಶನ ಹೆಚ್ಚಿಸುವ ಹಾಗೂ ಮಾಸಾಶನ ಪಡೆಯಲು ನಿಯಮಗಳನ್ನು ಸಡಿಲಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಕೆ. ಅಬ್ದುಲ್ ಜಬ್ಬರ್** ಅವರು ರಾಜ್ಯದಲ್ಲಿ ನಿರ್ಮಿತಿ ಕೇಂದ್ರಗಳಲ್ಲಿ ನಡೆಯುತ್ತಿರುವ ಹಗರಣಗಳ ಕುರಿತು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)** ಅವರು ಮೊಟ್ಟೆ ಬೆಲೆ ಜಾಸ್ತಿಯಾಗಿರುವುದರಿಂದ ಶಾಲಾ ಮುಖ್ಯ ಶಿಕ್ಷಕರಿಗೆ ಹೆಚ್ಚುವರಿ ಖರ್ಚು ಆಗುತ್ತಿದ್ದು, ಮಾರುಕಟ್ಟೆಗೆ ಅನುಗುಣವಾಗಿ ಮೊಟ್ಟೆ ದರವನ್ನು ಪರಿಷ್ಕರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಪುಟ್ಟಣ್ಣ** ಅವರು ಗ್ರಾಮೀಣ ಪ್ರದೇಶದಲ್ಲಿ ವ್ಯವಸಾಯ ಮಾಡುತ್ತಿರುವ ಗಂಡು ಮಕ್ಕಳನ್ನು ವಿವಾಹವಾಗುವ ಹೆಣ್ಣುಮಕ್ಕಳಿಗೆ ಪ್ರೋತ್ಸಾಹಧನ ನೀಡುವ ಬಗ್ಗೆ ಯೋಜನೆ ರೂಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ** ಅವರು ರಾಜ್ಯದ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಪಿಂಚಣಿ ಸೌಲಭ್ಯ ಕಲ್ಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಕೇಶವ ಪ್ರಸಾದ್ ಎಸ್** ಅವರು ವಿಧಾನ ಮಂಡಲದ ಕಲಾಪವನ್ನು ನಿಯಮಗಳನ್ವಯ ವರ್ಷಕ್ಕೆ 60 ದಿನಗಳಿಗೆ ಕಡಿಮೆ ಇಲ್ಲದಂತೆ ಸದನವನ್ನು ನಡೆಸಲು ಕ್ರಮವಹಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಗೋವಿಂದ ರಾಜು** ಅವರು ಕೋಲಾರ ಜಿಲ್ಲೆಯ ಎಸ್.ಎನ್.ಆರ್ ಆಸ್ಪತ್ರೆಗೆ ಒದಗಿಸಿರುವ ವೆಂಟಿಲೇಟರ್‌ಗಳ ಸದ್ಬಳಕೆಯಾಗದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಕಿಶೋರ್ ಕುಮಾರ್ ಪುತ್ತೂರ್** ಅವರು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಪ್ರಕರಣ ಸಂಖ್ಯೆ 64(5) ತಿದ್ದುಪಡಿ ಮಾಡಿ ಗ್ರಾಮಾಂತರ ಯೋಜನಾ ನಿಯಮವನ್ನು ಜಾರಿಗೆ ತಂದು ನಿವೇಶನದ ವಿನ್ಯಾಸ ಅನುಮೋದನೆ ಅಧಿಕಾರವನ್ನು ಗ್ರಾಮ ಪಂಚಾಯತಿಗೆ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಚಿದಾನಂದ್ ಎಂ. ಗೌಡ** ಅವರು ಚಿತ್ರದುರ್ಗ, ತುಮಕೂರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಶೇಂಗಾ ಬೆಳೆಗೆ ಬೆಂಬಲ ಬೆಲೆ ನೀಡುವುದು ಹಾಗೂ ಬೆಳೆಹಾನಿಗೊಳಗಾದರೆ ಪರಿಹಾರ ನೀಡಿ ಶೇಂಗಾ ಬೆಳೆಯನ್ನು ಪ್ರೋತ್ಸಾಹಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಸೂರಜ್ ರೇವಣ್ಣ** ಅವರು ಹಾಸನ ಜಿಲ್ಲೆಯಾದ್ಯಂತ ರಸ್ತೆ ಗುಂಡಿಗಳನ್ನು ದುರಸ್ಥಿಗೊಳಿಸಿ ಅಪಘಾತಗಳನ್ನು ತಡೆಗಟ್ಟಲು ಕ್ರಮಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ಶೂನ್ಯವೇಳೆ ಪ್ರಸ್ತಾವಗಳಿಗೆ ಉತ್ತರ

1. **ಶ್ರೀ ಸಿ.ಟಿ. ರವಿ ಹಾಗೂ ಶ್ರೀ ಜಗದೇವ್ ಗುತ್ತೇದಾರ್** ಅವರುಗಳು ಅಂತರಾಷ್ಟ್ರೀಯ ಡ್ರಗ್ಸ್ ಮಾಫಿಯಾಗೆ ಬೃಹತ್ ಮಾರುಕಟ್ಟೆಯಾಗಿ ರೂಪುಗೊಳ್ಳುತ್ತಿದ್ದು, ಡ್ರಗ್ಸ್ ಜಾಲದಿಂದ ಯುವ ಜನತೆಯನ್ನು ರಕ್ಷಿಸಲು ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಕುರಿತು ದಿನಾಂಕ:08.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಮಂಜುನಾಥ್ ಭಂಡಾರಿ** ಅವರು ಬೈಂದೂರನ್ನು ಪಟ್ಟಣ ಪಂಚಾಯತ್ ಆಗಿ ಮೇಲ್ದರ್ಜೆಗೇರಿಸಿರುವುದನ್ನು ರೈತರು ವಿರೋಧಿಸುತ್ತಿರುವ ಕುರಿತು ದಿನಾಂಕ:10.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಎಂ. ನಾಗರಾಜು** ಅವರು ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ 10 ಪ್ರಮುಖ ಇಲಾಖೆಗಳ ಶಾಶ್ವತ ಕಚೇರಿಗಳನ್ನು ಸ್ಥಳಾಂತರಿಸುವ ಕುರಿತು ದಿನಾಂಕ:10.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ಡಿ.ಎಸ್. ಅರುಣ್** ಅವರು ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಕೃಷಿ ಕಚೇರಿಗಳಲ್ಲಿ ಅಗತ್ಯವಿರುವ ತಾಂತ್ರಿಕ ಸಿಬ್ಬಂದಿ, ಕೃಷಿ ಸಹಾಯಕ ಹಾಗೂ ಕೃಷಿ ವಿಜ್ಞಾನಿಗಳ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ದಿನಾಂಕ:11.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಶ್ರೀ ಜಗದೇವ್ ಗುತ್ತೇದಾರ್ ಮತ್ತು ಶ್ರೀ ಎಂ. ನಾಗರಾಜು** ಅವರುಗಳು ರಾಜ್ಯದಲ್ಲಿರುವ ಅಂಗನವಾಡಿಗಳಲ್ಲಿರುವ ಮೂಲಭೂತ ಸೌಕರ್ಯ, ಸಿಬ್ಬಂದಿ ಕೊರತೆ ಆಹಾರ ವಿತರಣೆ ಸಮಸ್ಯೆ ಇವುಗಳ ಶಾಶ್ವತ ಪರಿಹಾರಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ದಿನಾಂಕ:12.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಶ್ರೀ ಎಂ. ನಾಗರಾಜು** ಅವರು ಕಿತ್ತೂರು ತಾಲ್ಲೂಕಿಗೆ ಬಸ್ ಡಿಪೋ ವ್ಯವಸ್ಥೆ ಕಲ್ಪಿಸುವ ಕುರಿತು ದಿನಾಂಕ:16.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

7. **ಶ್ರೀ ಐವನ್ ಡಿ'ಸೋಜಾ** ಅವರು ರಾಜ್ಯದಲ್ಲಿ ಶಾಲಾ ಶಿಕ್ಷಕರ ವರ್ಗಾವಣೆಯ ಕೌನ್ಸೆಲಿಂಗ್ ಮುಕ್ತಾಯಗೊಂಡಿದ್ದರೂ ಆದೇಶ ಹೊರಡಿಸಿ ಶಿಕ್ಷಕರನ್ನು ಬಿಡುಗಡೆಗೊಳಿಸದಿರುವ ಕುರಿತು ದಿನಾಂಕ:16.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 4. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅ. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಭಾರತದ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ಕೆಳಕಂಡ ವರದಿಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

1. "ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ (ಪಿಎಂಕೆಕೆಕೆವೈ) ಮೇಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್‌ಟಿ) ಒಳಗೊಂಡಂತೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್ ವರದಿ (2025ರ ವರದಿ ಸಂಖ್ಯೆ–7)
2. ಕರ್ನಾಟಕದಲ್ಲಿ ವಿಪತ್ತು ನಿರ್ವಹಣಾ ಕಾರ್ಯನಿರ್ವಹಣೆ (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್) (2025ರ ವರದಿ ಸಂಖ್ಯೆ–8)

3. 2024–25ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸಿನ ಲೆಕ್ಕಗಳು (ಸಂಪುಟ–I) ಹಾಗೂ (ಸಂಪುಟ–II ಭಾಗ–1 ಮತ್ತು 2)

ಆ. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಮಾನ್ಯ ಕಾರ್ಯದರ್ಶಿಯವರು ಮಂಡಿಸಿದರು.

1. ಚಂದ್ರಗುತ್ತಿ ಶ್ರೀ ರೇಣುಕಾಂಬ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2025
2. ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 2025
3. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ, 2025
4. ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2025
5. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2025
6. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕ, 2025
7. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕ, 2025
8. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ಎರಡನೇ ತಿದ್ದುಪಡಿ) ವಿಧೇಯಕ, 2025

## 5. ವಿತ್ತೀಯ ಕಾರ್ಯಕಲಾಪ

2025–26ನೇ ಸಾಲಿನ ಪೂರಕ ಅಂದಾಜುಗಳ ಎರಡನೇ ಕಂತನ್ನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಭಾನಾಯಕರು ಮಂಡಿಸಿದರು.

ಮಧ್ಯಾಹ್ನ 1.50 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಸದನವು ಮಧ್ಯಾಹ್ನ 3.25 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 6. ನಿಲುವಳಿ ಸೂಚನೆ

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್ ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ಸಿ.ಟಿ. ರವಿ, ಶ್ರೀ ಎಸ್.ವ್ಹಿ. ಸಂಕನೂರ, ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಹಾಗೂ ಇತರರು ರಾಜ್ಯದಲ್ಲಿ ಕೊಲೆ, ಸುಲಿಗೆ, ಅತ್ಯಾಚಾರ, ಡ್ರಗ್ಸ್ ದಂಧೆ ಹಾಗೂ ಇನ್ನಿತರೆ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವ ವಿಷಯದ ಕುರಿತು ನಿಯಮ 59ರಡಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರಿದರು.

ಸದರಿ ಸೂಚನೆಯನ್ನು ನಿಯಮ 330ರಡಿ ಪ್ರಸ್ತಾಪಿಸಲು ಅವಕಾಶ ನೀಡಿರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ತಿಳಿಸಿದರು.

## 7. ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಮುಂದುವರೆದ ವಿಶೇಷ ಚರ್ಚೆ

ಮಾನ್ಯ ಶಾಸಕರಾದ ಶ್ರೀ ಶಶೀಲ್ ಜಿ. ನಮೋಶಿ ಅವರು ಚರ್ಚೆಯಲ್ಲಿ ಭಾಗವಹಿಸಿದರು.

## 8. ಕ್ರಿಯಾಲೋಪ

ಮಾನ್ಯ ಶಾಸಕರಾದ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಕಲ್ಯಾಣ ಕರ್ನಾಟಕ ಭಾಗದ ನೇಮಕಾತಿ ಪ್ರಕ್ರಿಯೆಯಲ್ಲಿ ಅನುಪಾತ ಕ್ರಮಬದ್ಧವಾಗಿ ಅನುಸರಿಸಲು ಸರ್ಕಾರ ಕ್ರಮವಹಿಸುತ್ತಿಲ್ಲವೆಂದು ಕ್ರಿಯಾಲೋಪವನ್ನೆತ್ತಿದರು.

## ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಮುಂದುವರೆದ ವಿಶೇಷ ಚರ್ಚೆ

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

5. ಶ್ರೀ ಎಫ್.ಹೆಚ್. ಜಕ್ಕಪ್ಪನವರ್
6. ಶ್ರೀ ವೈ.ಎಂ. ಸತೀಶ್
7. ಶ್ರೀ ಎಂ. ನಾಗರಾಜು
8. ಶ್ರೀಮತಿ ಹೇಮಲತಾ ನಾಯಕ

## ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಕಾರ್ಯದರ್ಶಿಯವರು ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಹಾಗೂ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸಿದರು.

1. ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2025
2. ಕರ್ನಾಟಕ ಬಾಡಿಗೆ (ತಿದ್ದುಪಡಿ) ವಿಧೇಯಕ, 2025

## ವಿತ್ತೀಯ ಕಾರ್ಯಕಲಾಪ

2025–26ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಭಾನಾಯಕರು ಮಂಡಿಸಿದರು.

## 9. ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

**1.** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **“ಚಂದ್ರಗುತ್ತಿ ಶ್ರೀ ರೇಣುಕಾಂಬ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ”**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀಮತಿ ಭಾರತಿ ಶೆಟ್ಟಿ
2. ಶ್ರೀ ರಮೇಶ್ ಬಾಬು

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**2.** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **“ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ”**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

3. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

4. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಾರ್ಮಿಕ ಸಚಿವರು ವಿವರಣೆ ನೀಡಿದರು.

ಮಾನ್ಯ ಶಾಸಕರಾದ ಶ್ರೀ ಶಿವಕುಮಾರ್ ಕೆ. ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಕಾರ್ಮಿಕ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

5. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಾರ್ಮಿಕ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಕೇಶವ ಪ್ರಸಾದ್ ಎಸ್
2. ಐವನ್ ಡಿ'ಸೋಜಾ
3. ಸಿ.ಟಿ. ರವಿ
4. ಕೆ.ಎಸ್. ನವೀನ್
5. ಡಾ: ಧನಂಜಯ ಸರ್ಜಿ
6. ಗೋವಿಂದ ರಾಜು
7. ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
8. ಶರವಣ ಟಿ.ಎ

ಮಾನ್ಯ ಕಾರ್ಮಿಕ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 10. ಅಭಿನಂದನಾ ನಿರ್ಣಯ

ಮಾನ್ಯ ಶಾಸಕರಾದ ಶ್ರೀಮತಿ ಭಾರತಿ ಶೆಟ್ಟಿ ಅವರು ಗುಲಾಬಿ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾಗಿರುವ ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ: ಉಮಾಶ್ರೀ ಅವರು ರಂಗಭೂಮಿ, ಚಲನಚಿತ್ರರಂಗ ಹಾಗೂ ರಾಜಕೀಯ ರಂಗದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ಡಾ: ರಾಜಕುಮಾರ್ ಜೀವಮಾನ ಪ್ರಶಸ್ತಿಗೆ ಭಾಜನರಾಗಿರುವುದಕ್ಕೆ ಈ ಸದನವು ಅವರಿಗೆ ಹೃತ್ಪೂರ್ವಕ ಅಭಿನಂದನಾ ಪ್ರಸ್ತಾವವನ್ನು ಮಂಡಿಸಿದರು.

ಮಾನ್ಯ ಶಾಸಕರಾದ ಶ್ರೀಮತಿ ಹೇಮಲತಾ ನಾಯಕ ಅವರು ಅಭಿನಂದನಾ ಪ್ರಸ್ತಾವವನ್ನು ಅನುಮೋದಿಸಿ ಮಾತನಾಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಅಭಿನಂದಿಸಿದರು.

1. ಶ್ರೀ ಐವನ್ ಡಿ'ಸೋಜಾ
2. ಶ್ರೀಮತಿ ಬಲ್ಕೀಸ್ ಬಾನು
3. ಶ್ರೀ ಕೇಶವ ಪ್ರಸಾದ್ ಎಸ್
4. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
5. ಡಾ: ಧನಂಜಯ ಸರ್ಜಿ

ಮಾನ್ಯ ಶಾಸಕರಾದ ಡಾ: ಉಮಾಶ್ರೀ ಅವರು ಧನ್ಯವಾದಗಳನ್ನು ಅರ್ಪಿಸಿದರು.

## ಶಾಸನ ರಚನೆ

### <u>ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು</u>

**6.** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**7.** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಬಾಡಿಗೆ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಶರವಣ ಟಿ.ಎ
2. ಕೆ.ಎಸ್. ನವೀನ್
3. ರಮೇಶ್ ಬಾಬು

ಮಾನ್ಯ ಕಂದಾಯ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**8**. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀಮತಿ ಬಲ್ಕೀಸ್ ಬಾನು
2. ಶ್ರೀ ಐವನ್ ಡಿ'ಸೋಜಾ
3. ಶ್ರೀ ಸಿ.ಟಿ. ರವಿ
4. ಶ್ರೀ ಮಂಜುನಾಥ್ ಭಂಡಾರಿ

ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**9**. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀಮತಿ ಬಲ್ಕೀಸ್ ಬಾನು
2. ಶ್ರೀ ರಮೇಶ್ ಬಾಬು
3. ಶ್ರೀ ಕೆ.ಎಸ್. ನವೀನ್

ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 11. ಸಚಿವರ ಹೇಳಿಕೆ

ಮಾನ್ಯ ಶಾಸಕರಾದ ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) ಅವರು ಸಲ್ಲಿಸಿದ ಹಕ್ಕುಚ್ಯುತಿ ಸೂಚನೆಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮದ ಕುರಿತು ಹೇಳಿಕೆ ನೀಡಿದರು.

## ಶಾಸನ ರಚನೆ

<u>ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು</u>

**10**. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ಎರಡನೇ ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಉನ್ನತ ಶಿಕ್ಷಣ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
2. ಡಾ: ತಳವಾರ್ ಸಾಬಣ್ಣ

ಮಾನ್ಯ ಉನ್ನತ ಶಿಕ್ಷಣ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**11**. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಶಿವಕುಮಾರ್ ಕೆ
2. ಕೆ.ಎಸ್. ನವೀನ್
3. ಬಿ.ಕೆ. ಹರಿಪ್ರಸಾದ್

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಮುಂದುವರೆದ ವಿಶೇಷ ಚರ್ಚೆ

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

9. ಶ್ರೀ ತಿಪ್ಪಣ್ಣಪ್ಪ ಕಮಕನೂರ
10. ಡಾ: ತಳವಾರ್ ಸಾಬಣ್ಣ
11. ಶ್ರೀ ಕೆ.ಎಸ್. ನವೀನ್
12. ಶ್ರೀ ರಮೇಶ್ ಬಾಬು

ಸದನವನ್ನು ರಾತ್ರಿ 10.00 ಗಂಟೆಯಲ್ಲಿ ಮುಂದೂಡಿ ದಿನಾಂಕ:18.12.2025ರಂದು ಬೆಳಗ್ಗೆ 10.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

****

**ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತೇಳನೆಯ ಅಧಿವೇಶನ
ಲಘು ಪ್ರಕಟಣೆ ಭಾಗ–1
ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ
ಗುರುವಾರ, ದಿನಾಂಕ:18.12.2025
**(09)**

ದಿನಾಂಕ:18.12.2025 ರಂದು ಬೆಳಗ್ಗೆ 10.36 ಗಂಟೆಗೆ ಸದನವು ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರವರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

**1.** ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು **ದಿನಾಂಕ:16.12.2025ರಂದು ಔಷಧ ಮತ್ತು ಪ್ರಸಾಧನ ಸಾಮಗ್ರಿ (ಕರ್ನಾಟಕ** ತಿದ್ದುಪಡಿ**) ವಿಧೇಯಕ, 2025ನ್ನು ತಿದ್ದುಪಡಿಯೊಂದಿಗೆ** ಹಾಗೂ ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
2. ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ವಿಧೇಯಕ, 2025
3. ಬಾಂಬೆ ಸಾರ್ವಜನಿಕ ನ್ಯಾಸ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025
4. ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025

## 2. ಪ್ರಶ್ನೋತ್ತರ

ದಿನಾಂಕ:18.12.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IVರ 9ನೇ ಪಟ್ಟಿಯ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 121(1358)
2. 122(1394)
3. 123(1374)
4. 124(1429)
5. 125(1445) ಕಾಲಾವಕಾಶ
6. 126(1479)
7. 127(1463)
8. 128(1507)
9. 129(1482)
10. 130(1412)
11. 131(1494)
12. 132(1368)
13. 133(1385)
14. 134(1363)
15. 135(1444)

**ದಿನಾಂಕ:11.12.2025ರ ಸಮೂಹ–IVರ 4ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು**

1. 54(538)
2. 55(601) ಕಾಲಾವಕಾಶ

ದಿನಾಂಕ:18.12.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IVರ 9ನೇ ಪಟ್ಟಿಯ ಒಟ್ಟು 161 ಪ್ರಶ್ನೆಗಳ ಪೈಕಿ 76 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 3. ಶೂನ್ಯವೇಳೆ ಪ್ರಸ್ತಾವಗಳು

1. **ಶ್ರೀ ಬಸನಗೌಡ ಬಾದರ್ಲಿ** ಅವರು ರಾಜ್ಯದಲ್ಲಿ ಭತ್ತ ಅಭಿವೃದ್ಧಿ ಮಂಡಳಿ ಸ್ಥಾಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕೃಷಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಡಾ: ತಳವಾರ್ ಸಾಬಣ್ಣ, ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಮತ್ತು ಡಾ: ಧನಂಜಯ ಸರ್ಜಿ** ಅವರುಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಮೆಟ್ರಿಕ್ ನಂತರದ ಅರ್ಹ ವಿದ್ಯಾರ್ಥಿಗಳಿಗೆ ಸ್ಕಾಲಾರ್‌ಶಿಪ್ ನೀಡದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಉತ್ತರಿಸಿದರು.

3. **ಶ್ರೀಮತಿ ಭಾರತಿ ಶೆಟ್ಟಿ** ಅವರು ಶಕ್ತಿ ಯೋಜನೆ ಫಲಾನುಭವಿಗಳ ಮೊತ್ತವನ್ನು ರಾಜ್ಯ ಸರ್ಕಾರ ನಿಗಮಗಳಿಗೆ ಪಾವತಿಸದೆ ಇರುವುದರಿಂದ ಅನಾನುಕೂಲವಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಉತ್ತರಿಸಿದರು.

4. **ಶ್ರೀ ಐವನ್ ಡಿ'ಸೋಜಾ** ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ಕ್ರಮಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಮಂಜುನಾಥ್ ಭಂಡಾರಿ** ಅವರು ರಕ್ಷಿತಾರಣ್ಯದಲ್ಲಿ ಅಕೇಶಿಯಾ ಮರಗಳನ್ನು ತೆರವುಗೊಳಿಸಲು ಹಾಗೂ ಕಾಡು ಪ್ರಾಣಿಗಳಿಗೆ ಆಹಾರ ಒದಗಿಸುವ ಸ್ಥಳೀಯ ಜಾತಿಯ ಮರಗಳನ್ನು ಬೆಳೆಸಲು ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಶಶೀಲ್ ಜಿ ನಮೋಶಿ** ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳ ನೇಮಕಾತಿ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರಿಸಿದರು.

7. **ಶ್ರೀ ಡಿ.ಎಸ್. ಅರುಣ್** ಅವರು ಸೈಬರ್ ವಂಚನೆ ಪ್ರಕರಣದಲ್ಲಿ ಹಣ ಕಳೆದುಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಅವುಗಳನ್ನು ಭೇದಿಸುವಂತಹ ನೈಪುಣ್ಯತೆಯನ್ನು ಹೊಂದಿದಂತಹ ತಂಡಗಳನ್ನು ರಚಿಸಿ ವಂಚನೆ ಪ್ರಕರಣಗಳನ್ನು ತಡೆಗಟ್ಟುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀಮತಿ ಹೇಮಲತಾ ನಾಯಕ** ಅವರು ಮಹಿಳೆ ಮತ್ತು ಹೆಣ್ಣು ಮಕ್ಕಳ ನಾಪತ್ತೆ ಪ್ರಕರಣಗಳು ಹೆಚ್ಚುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಗೋವಿಂದ ರಾಜು** ಅವರು ಶಾಲೆಗಳಲ್ಲಿ ಬಿಸಿಯೂಟ ತಯಾರಿಕಾ ಕೊಠಡಿಗಳು ದುಸ್ಥಿತಿಯಲ್ಲಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

10. **ಶ್ರೀ ರಮೇಶ್ ಬಾಬು** ಅವರು ಕನ್ನಡ ಪರ ಸಂಘಟನೆಗಳಿಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು ನಿವೇಶನ ಹೊಂದಲು ನೀತಿಯನ್ನು ರೂಪಿಸಿ ಸಹಾಯಧನ ಒದಗಿಸಲು ಆದೇಶ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

11. **ಶ್ರೀ ಪಿ.ಹೆಚ್. ಪೂಜಾರ್** ಅವರು ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಬೇಡಿಕೆಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

12. **ಡಾ: ಉಮಾಶ್ರೀ** ಅವರು ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ ತಾಲ್ಲೂಕಿನ ಕೃಷ್ಣಾ ನದಿಗೆ ಅಡ್ಡವಾಗಿ ನಿರ್ಮಾಣ ಮಾಡುತ್ತಿರುವ ಸೇತುವೆ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

13. **ಶ್ರೀ ಸಿ.ಟಿ. ರವಿ** ಅವರು ಸಾರಿಗೆ ನಿಗಮದ ನೌಕರರ ವೇತನ ಹೆಚ್ಚಳ ಹಾಗೂ ಇನ್ನಿತರೆ ಬೇಡಿಕೆಗಳನ್ನು ಈಡೇರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

14. **ಶ್ರೀ ಹೆಚ್.ಪಿ. ಸುಧಾಮ್ ದಾಸ್** ಅವರು ರಾಯಚೂರು ಜಿಲ್ಲೆಯ ಲಿಂಗಸೂರು ತಾಲ್ಲೂಕಿನ ಕೃಷ್ಣ ನದಿಯ ನಡುಗಡೆಯಲ್ಲಿ ವಾಸಿಸುತ್ತಿರುವ ಯರಗೋಡಿ ಗ್ರಾಮಸ್ಥರು ಪ್ರವಾಹಕ್ಕೆ ಆಹುತಿಯಾಗುತ್ತಿದ್ದು ಅವರುಗಳಿಗೆ ಪರ್ಯಾಯ ಜಮೀನನ್ನು ಶಾಶ್ವತವಾಗಿ ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

15. **ಶ್ರೀ ಎಂ. ನಾಗರಾಜು** ಅವರು ಖಾನಾಪುರ ಪಟ್ಟಣದ ವಿದ್ಯಾ ನಗರದಲ್ಲಿ ಸರ್ಕಾರಿ ಪಿ.ಯು. ಕಾಲೇಜಿಗೆ ಮೂಲಸೌಕರ್ಯ ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರಿಸಿದರು.

16. **ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ** ಅವರು ಬೆಳಗಾವಿ ಜಿಲ್ಲೆ ಚಿಕ್ಕೋಡಿ, ನಿಪ್ಪಾಣಿ, ಅಥಣಿ ಮತ್ತು ರಾಯಬಾಗ್ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಸೇತುವೆ ಕಾಮಗಾರಿ ವಿಳಂಬವಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

17. **ಶ್ರೀ ಜಗದೇವ್ ಗುತ್ತೇದಾರ್** ಅವರು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅಧ್ಯಾಯನ ಪೀಠ ಸ್ಥಾಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 4. ಶೂನ್ಯವೇಳೆ ಪ್ರಸ್ತಾವಗಳಿಗೆ ಉತ್ತರ

1. **ಶ್ರೀ ಕಿಶೋರ್ ಕುಮಾರ್ ಪುತ್ತೂರ್** ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿರುವ ನಿವೇಶನ ಮತ್ತು ಕಟ್ಟಡಗಳಿಗೆ ಆನ್‌ಲೈನ್ ಮೂಲಕ ಖಾತಾಪತ್ರ ವಿತರಿಸಲು ಅಭಿವೃದ್ಧಿಪಡಿಸಿರುವ ಇ–ಸ್ವತ್ತು 2.0 ತಂತ್ರಾಂಶದ ಲೋಪದೋಷಗಳನ್ನು ಸರಿಪಡಿಸುವ ಕುರಿತು ದಿನಾಂಕ:12.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಮಂಜುನಾಥ್ ಭಂಡಾರಿ** ಅವರು ಮಂಗಳೂರಿನ ಮೂಡುಶೆಡ್ಡೆಯಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮತ್ತು ಕಿದ್ವಾಯಿ ಸ್ಮಾರಕ ಗ್ರಂಥಿ ಆಸ್ಪತ್ರೆಗಳ ಘಟಕಗಳನ್ನು ಸ್ಥಾಪಿಸುವ ಕುರಿತು ದಿನಾಂಕ:16.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಸಿ.ಟಿ. ರವಿ** ಅವರು ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಸಂಯೋಜಿತ ಕಾಲೇಜುಗಳಲ್ಲಿನ 400 ಎಂ.ಕಾಂ ವಿದ್ಯಾರ್ಥಿಗಳು ಅಂತಿಮ ಸೆಮಿಸ್ಟರ್‌ನಲ್ಲಿ ಅನುತ್ತೀರ್ಣರಾಗಿರುವ ಕುರಿತು ದಿನಾಂಕ:16.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುದಾನ ಬಿಡುಗಡೆಯಾಗದಿರುವ ಕುರಿತು ದಿನಾಂಕ:16.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಡಾ: ತಳವಾರ್ ಸಾಬಣ್ಣ** ಅವರು ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಿ, ವಿಶ್ವವಿದ್ಯಾಲಯಕ್ಕೆ 12ಬಿ ಮಾನ್ಯತೆ ದೊರಕಿಸಿಕೊಡುವ ಕುರಿತು ದಿನಾಂಕ:16.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಡಾ: ಧನಂಜಯ ಸರ್ಜಿ ಮತ್ತು ಶ್ರೀ ಪ್ರದೀಪ್ ಶೆಟ್ಟರ್** ಅವರುಗಳು ಜನೌಷಧಿ ಕೇಂದ್ರಗಳನ್ನು ತೆರೆಯುವ ಕುರಿತು ದಿನಾಂಕ:16.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

7. **ಶ್ರೀ ರಮೇಶ್ ಬಾಬು** ಅವರು ಖಾಸಗಿ ಯೂಟ್ಯೂಬ್ ಚಾನಲ್‌ನಲ್ಲಿ ಮೊಟ್ಟೆ ಬಳಕೆ ಕ್ಯಾನ್ಸರ್‌ಗೆ ಅವಕಾಶವಾಗುತ್ತದೆ ಎಂದು ಸುದ್ದಿ ಪ್ರಕಟ ಮಾಡಿದ್ದು ಅವರ ಮೇಲೆ ಪ್ರಕರಣ ದಾಖಲಿಸುವ ಕುರಿತು ದಿನಾಂಕ:16.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

8. **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ** ಅವರು ರಾಜ್ಯದಲ್ಲಿರುವ ವಿಕಲಚೇತನರಿಗೆ ಮಾಸಾಶನ ಹೆಚ್ಚಿಸುವ ಹಾಗೂ ಮಾಸಾಶನ ಪಡೆಯಲು ನಿಯಮಗಳನ್ನು ಸಡಿಲಿಸುವ ಕುರಿತು ದಿನಾಂಕ:17.12.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 5. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅ. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಭಾರತದ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (ಐಪಿಡಿಎಸ್) ಅನುಷ್ಠಾನದ ಮೇಲಿನ (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ವಾಣಿಜ್ಯ) (2025ರ ವರದಿ ಸಂಖ್ಯೆ–9) ವರದಿಯನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

ಮಧ್ಯಾಹ್ನ 1.04 ಗಂಟೆಯಲ್ಲಿ **ಶ್ರೀ ಬಿ.ಕೆ. ಹರಿಪ್ರಸಾದ್** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

ಮಧ್ಯಾಹ್ನ 1.24 ಗಂಟೆಯಲ್ಲಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪೀಠದಲ್ಲಿ ಆಸೀನರಾದರು.

ಆ. ಕಾರ್ಯದರ್ಶಿಯವರು ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ವಿಧೇಯಕವನ್ನು ಹಾಗೂ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಿದರು.

ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರು ಮಂಡಿಸಿದ ಪ್ರಶ್ನೆಗೆ ಉತ್ತರ ಒದಗಿಸಲು ನಿರಾಕರಿಸಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಸಕರಾದ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಕೇಂದ್ರ ಸರ್ಕಾರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮ.ನರೇಗಾ)(MGNREGA) ಕಾಯ್ದೆಗೆ ತಿದ್ದುಪಡಿ ತಂದಿರುವ ವಿಷಯದ ಕುರಿತು ಸದನದಲ್ಲಿ ಚರ್ಚಿಸಲು ಅವಕಾಶ ನೀಡಬೇಕೆಂದು ಕೋರಿದರು.

## 6. ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಉಪ ಮುಖ್ಯಮಂತ್ರಿಗಳು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.
ಶ್ರೀಯುತರುಗಳಾದ

1. ಸಿ.ಟಿ. ರವಿ
2. ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
3. ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್)
4. ರಮೇಶ್ ಬಾಬು
5. ಎಂ. ನಾಗರಾಜು
6. ಶರವಣ ಟಿ.ಎ
7. ಐವನ್ ಡಿ'ಸೋಜಾ
8. ಕೇಶವ ಪ್ರಸಾದ್ ಎಸ್
9. ಚಿದಾನಂದ್ ಎಂ. ಗೌಡ
10. ಪುಟ್ಟಣ್ಣ

ಮಾನ್ಯ ಉಪ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**2.** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 7. ಗಮನ ಸೆಳೆಯುವ ಸೂಚನೆಗಳು

**1.** **ಶ್ರೀ ಮಂಜುನಾಥ್ ಭಂಡಾರಿ** ಅವರು ಉಡುಪಿ ಜಿಲ್ಲೆಯ ರೈತರ ಹಿತದೃಷ್ಠಿಯಿಂದ ವಾರಾಹಿ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸುವ ಕುರಿತು ಮಾನ್ಯ ಉಪ ಮುಖ್ಯಮಂತ್ರಿಗಳ ಗಮನ ಸೆಳೆದರು.

ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

## ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರವರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

**2.** ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು **ದಿನಾಂಕ:18.12.2025ರಂದು ಕರ್ನಾಟಕ ಧನವಿನಿಯೋಗ (ಸಂಖ್ಯೆ:04) ವಿಧೇಯಕ, 2025ನ್ನು** ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಮಧ್ಯಾಹ್ನ 2.16 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

ಸದನವು ಮಧ್ಯಾಹ್ನ 3.40 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## ಗಮನ ಸೆಳೆಯುವ ಸೂಚನೆಗಳು

**2.** **ಶ್ರೀ ಗೋವಿಂದ ರಾಜು** ಅವರು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು ಕಸಬಾ ಹೋಬಳಿ ಶಿವಾರ ಪಟ್ಟಣ ಗ್ರಾಮದ ಸರ್ವೇ ನಂ.19/1ರಲ್ಲಿರುವ 1 ಎಕರೆ 23 ಗುಂಟೆ ಜಮೀನು ಹಾಗೂ ಸರ್ವೇ ನಂ.19/2ರಲ್ಲಿರುವ 3 ಎಕರೆ 10 ಗುಂಟೆ ಜಮೀನುಗಳನ್ನು ವಸತಿ ಉದ್ದೇಶಗಳಿಗಾಗಿ 2019ರಲ್ಲಿ ಭೂಪರಿವರ್ತನೆಗೊಂಡಿದ್ದರೂ, ಸದರಿ ಜಮೀನುಗಳನ್ನು ಕೆ.ಐ.ಎಡಿ.ಬಿ ಅವರು ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ:10.09.2024ರಂದು ಆದೇಶ ಹೊರಡಿಸಿರುವ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಗಮನ ಸೆಳೆದರು.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಉತ್ತರಿಸಿದರು.

**3.** **ಶ್ರೀಮತಿ ಬಲ್ಕೀಸ್ ಬಾನು, ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್), ಶ್ರೀ ರಮೇಶ್ ಬಾಬು ಹಾಗೂ ಶ್ರೀ ಡಿ.ಎಸ್. ಅರುಣ್** ಅವರುಗಳು ಶಿವಮೊಗ್ಗ ತಾಲ್ಲೂಕಿನ ನಿದಿಗೆ ಹೋಬಳಿಯ ಊರಗಡೂರು ಗ್ರಾಮದ ಸರ್ವೇ ನಂ.340 ರಿಂದ 357ರವರೆಗೆ ಒಟ್ಟು 60 ಎಕರೆ 30 ಗುಂಟೆ ಜಮೀನನ್ನು ಶಿವಮೊಗ್ಗ ಭದ್ರಾವತಿ ನಗರ ಪ್ರಾಧಿಕಾರದಿಂದ ವಸತಿ ಯೋಜನೆ ರೂಪಿಸಲು ಭೂಸ್ವಾಧೀನ ಪಡಿಸಿಕೊಂಡು ಪರಿಹಾರ ಮಂಜೂರು ಮಾಡಿದ್ದರೂ ಭೂಮಾಲೀಕರಿಗೆ ಪಾವತಿಸದಿರುವ ಕುರಿತು ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಗಮನ ಸೆಳೆದರು.

ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ರಮೇಶ್ ಬಾಬು
2. ಡಿ.ಎಸ್. ಅರುಣ್
3. ನಸೀರ್ ಅಹ್ಮದ್

ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಸ್ಪಷ್ಟೀಕರಣ ನೀಡಿದರು.

4. **ಶ್ರೀಯುತರುಗಳಾದ ಸಿ.ಟಿ. ರವಿ, ಭಾರತಿ ಶೆಟ್ಟಿ, ಕೇಶವ ಪ್ರಸಾದ್ ಎಸ್., ಪ್ರತಾಪ್ ಸಿಂಹ ನಾಯಕ್ ಕೆ. ಹಾಗೂ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್** ಅವರುಗಳು ಕೊಡಗು, ಹಾವೇರಿ ಮತ್ತು ರಾಯಚೂರು ಸೇರಿದಂತೆ ರಾಜ್ಯದ ಹಲವು ಮೆಡಿಕಲ್ ಕಾಲೇಜುಗಳಲ್ಲಿ ಔಷಧಿ ಖರೀದಿಗಾಗಿ ನಡೆಸಿದ ಟೆಂಡರ್ ಮೊತ್ತ ಹಾಗೂ ಚಿಕ್ಕಮಗಳೂರು ಮೆಡಿಕಲ್ ಕಾಲೇಜು ಮತ್ತು ಜಿಲ್ಲಾ ಆಸ್ಪತ್ರೆಗೆ ಔಷಧಿಗಳನ್ನು ಖರೀಸಿಸುವಲ್ಲಿ ನಡೆಸಿದ ಟೆಂಡರ್‌ನ ಮೊತ್ತದಲ್ಲಿ ವ್ಯತ್ಯಾಸವಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿನ ಲೋಪದೋಷಗಳ ಕುರಿತು ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆದರು.

ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಕೇಶವ ಪ್ರಸಾದ್ ಎಸ್
2. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
3. ಶ್ರೀಮತಿ ಭಾರತಿ ಶೆಟ್ಟಿ

ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಸ್ಪಷ್ಟೀಕರಣ ನೀಡಿದರು.

## 8. ನಿಯಮ 330ರ ಮೇರೆಗೆ

1. **ಶ್ರೀ ಬಿ.ಜಿ. ಪಾಟೀಲ್** ಅವರು ಕಲ್ಯಾಣ ಕರ್ನಾಟಕ ಭಾಗದಲ್ಲಿ ಪಾರಂಪರಿಕ ವೈದ್ಯ ಪದ್ಧತಿಯನ್ನು ಬಳಸಿ ಕಾಯಿಲೆಗಳನ್ನು ಗುಣಪಡಿಸುವವರ ಮಕ್ಕಳಿಗೆ ಬಿ.ಎ.ಎಂ.ಎಸ್ ವಿದ್ಯಾಭ್ಯಾಸದಲ್ಲಿ ಶೇ.2ರಷ್ಟು ಮೀಸಲಾತಿ ಕಲ್ಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

## ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**ಕಾರ್ಯದರ್ಶಿಯವರು ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಔಷಧ ಮತ್ತು ಪ್ರಸಾಧನ ಸಾಮಗ್ರಿ (ಕರ್ನಾಟಕ ತಿದ್ದುಪಡಿ) ವಿಧೇಯಕ ಹಾಗೂ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸಿದರು**

4. ಕರ್ನಾಟಕ ಧನವಿನಿಯೋಗ (ಸಂಖ್ಯೆ:04) ವಿಧೇಯಕ, 2025
5. ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
6. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
7. ಬಾಂಬೆ ಸಾರ್ವಜನಿಕ ನ್ಯಾಸ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025

## ಶಾಸನ ರಚನೆ

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**3.** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಧನವಿನಿಯೋಗ (ಸಂಖ್ಯೆ:04) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**4.** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ

1. ಗೋವಿಂದ ರಾಜು
2. ಡಿ.ಎಸ್. ಅರುಣ್
3. ಎಸ್.ಎಲ್. ಭೋಜೇಗೌಡ
4. ಭಾರತಿ ಶೆಟ್ಟಿ
5. ಡಾ: ತಳವಾರ್ ಸಾಬಣ್ಣ
6. ಶರವಣ ಟಿ.ಎ
7. ಸಿ.ಟಿ. ರವಿ

## “ಗದ್ದಲ”

ಸಂಜೆ 5.14 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಸದನವು ಸಂಜೆ 5.25 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**5.** ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **“ಬಾಂಬೆ ಸಾರ್ವಜನಿಕ ನ್ಯಾಸ (ಕರ್ನಾಟಕ ತಿದ್ದುಪಡಿ) ವಿಧೇಯಕ”**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರ ಪರವಾಗಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ

1. ಪಿ.ಹೆಚ್. ಪೂಜಾರ್
2. ಎಸ್.ವ್ಹಿ. ಸಂಕನೂರ

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**6.** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **“ಔಷಧ ಮತ್ತು ಪ್ರಸಾಧನ ಸಾಮಗ್ರಿ (ಕರ್ನಾಟಕ ತಿದ್ದುಪಡಿ) ವಿಧೇಯಕ”**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರ ಪರವಾಗಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ವಿವರಣೆ ನೀಡಿದರು.

ಸಂಜೆ 5.50 ಗಂಟೆಯಲ್ಲಿ **ಶ್ರೀ ಎಸ್.ಎಲ್. ಭೋಜೇಗೌಡ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಡಾ: ಧನಂಜಯ ಸರ್ಜಿ
2. ಶ್ರೀ ಕೆ.ಎಸ್. ನವೀನ್

ಸಂಜೆ 5.58 ಗಂಟೆಯಲ್ಲಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪೀಠದಲ್ಲಿ ಆಸೀನರಾದರು.

3. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
4. ಶ್ರೀ ಎಸ್.ವ್ಹಿ. ಸಂಕನೂರ

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

7. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರ ಪರವಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಸಂಜೆ 6.13 ಗಂಟೆಯಲ್ಲಿ **ಶ್ರೀ ಎಸ್.ಎಲ್. ಭೋಜೇಗೌಡ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

## ನಿಯಮ 330ರ ಮೇರೆಗೆ

2. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಹಾಗೂ ಶ್ರೀ ಪಿ.ಹೆಚ್. ಪೂಜಾರ್** ಅವರುಗಳು ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ವಸತಿ ಹಾಗೂ ಜಮೀನುಗಳನ್ನು ಕಳೆದುಕೊಂಡ ರೈತರಿಗೆ ಪುನರ್ ವಸತಿ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಸಕರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರಿಸಿದರು.

3. **ಡಾ: ತಳವಾರ್ ಸಾಬಣ್ಣ** ಅವರು ನ್ಯಾಬಚಾವತ್ ಆಯೋಗದ ತೀರ್ಪಿನ ರೀತ್ಯಾ ಕಲಬುರಗಿ, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಯ ಜನರು ಭೀಮಾ ನದಿಯ 15 ಟಿಎಂಸಿ ನೀರನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲು ಅನುವಾಗುವಂತೆ ಕ್ರಮಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಸಂಜೆ 6.45 ಗಂಟೆಯಲ್ಲಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರಿಸಿದರು.

**4.** **ಶ್ರೀ ಶಿವಕುಮಾರ್ ಕೆ.** ಅವರು ಆದಿವಾಸಿ ಜನಾಂಗದವರನ್ನು ಪರಿಶಿಷ್ಠ ಪಂಗಡದ ಒಳಮೀಸಲಾತಿಗೆ ಸೇರಿಸುವುದು ಹಾಗೂ ಅವರುಗಳಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸುವ ದೃಷ್ಠಿಯಿಂದ ಪ್ರೊ. ಮುಜಾಫರ್ ಅಸ್ಸಾದಿ ವರದಿಯಲ್ಲಿರುವ ಅಂಶಗಳನ್ನು ಜಾರಿಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಉತ್ತರಿಸಿದರು.

## ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರವರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು **ದಿನಾಂಕ:18.12.2025ರಂದು** ಈ ಕೆಳಕಂಡ ವಿಧೇಯಕಗಳನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2025
2. ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ, 2025
3. ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ವಿಧೇಯಕ, 2025

ಸದನವನ್ನು ಸಂಜೆ 7.15 ಗಂಟೆಯಲ್ಲಿ ಮುಂದೂಡಿ, ದಿನಾಂಕ:19.12.2025ರಂದು ಬೆಳಗ್ಗೆ 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

****

**ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತೇಳನೆಯ ಅಧಿವೇಶನ
ಲಘು ಪ್ರಕಟಣೆ ಭಾಗ–1
ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ
ಶುಕ್ರವಾರ, ದಿನಾಂಕ:19.12.2025
**(10)**

ದಿನಾಂಕ:19.12.2025 ರಂದು ಬೆಳಗ್ಗೆ 10.15 ಗಂಟೆಗೆ ಸದನವು ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರವರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು **ದಿನಾಂಕ:19.12.2025ರಂದು** ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ (ತಿದ್ದುಪಡಿ) ವಿಧೇಯಕ, 2025
2. ಕರ್ನಾಟಕ ಅನುಸೂಚಿತ ಜಾತಿಗಳ (ಉಪ–ವರ್ಗೀಕರಣ) ವಿಧೇಯಕ, 2025

## 2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**ಕಾರ್ಯದರ್ಶಿಯವರು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ (ತಿದ್ದುಪಡಿ) ವಿಧೇಯಕ 2025ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳ (ಉಪ–ವರ್ಗೀಕರಣ) ವಿಧೇಯಕ ಹಾಗೂ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸಿದರು.**

3. ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ವಿಧೇಯಕ, 2025

4. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2025

5. ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ, 2025

## 3. ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

**1.** ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಐವನ್ ಡಿ'ಸೋಜಾ
2. ಎಸ್.ಎಲ್. ಭೋಜೇಗೌಡ
3. ಎಸ್.ವ್ಹಿ. ಸಂಕನೂರ

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**2.** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಮಾಜ ಕಲ್ಯಾಣ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಮತಿ/ಶ್ರೀಯುತರುಗಳಾದ:

1. ಎಫ್.ಹೆಚ್. ಜಕ್ಕಪ್ಪನವರ್
2. ಶಿವಕುಮಾರ್ ಕೆ.
3. ಬಲ್ಕೀಸ್ ಬಾನು
4. ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
5. ಹೇಮಲತಾ ನಾಯಕ
6. ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು

ಮಾನ್ಯ ಸಮಾಜ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

3. ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಗೃಹ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಮತಿ/ಶ್ರೀಯುತರುಗಳಾದ:

1. ಕೆ.ಎಸ್. ನವೀನ್
2. ಸಿ.ಟಿ. ರವಿ

ಮಧ್ಯಾಹ್ನ 12.40 ಗಂಟೆಯಲ್ಲಿ 5 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

ಸದನವು ಮಧ್ಯಾಹ್ನ 12.57 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## "ಗದ್ದಲ"

ಶ್ರೀಮತಿ/ಶ್ರೀಯುತರುಗಳಾದ:

3. ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)
4. ಶರವಣ ಟಿ.ಎ
5. ಪ್ರತಾಪ್ ಸಿಂಹ ನಾಯಕ್ ಕೆ.
6. ಐವನ್ ಡಿ'ಸೋಜಾ
7. ಭಾರತಿ ಶೆಟ್ಟಿ
8. ಬಿ.ಕೆ. ಹರಿಪ್ರಸಾದ್
9. ಕೇಶವ ಪ್ರಸಾದ್ ಎಸ್
10. ಪಿ.ಹೆಚ್. ಪೂಜಾರ್
11. ಎಂ. ನಾಗರಾಜು

ಮಧ್ಯಾಹ್ನ 3.00 ಗಂಟೆಯಲ್ಲಿ **ಶ್ರೀ ಎಸ್.ಎಲ್. ಭೋಜೇಗೌಡ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

12. ಗೋವಿಂದ ರಾಜು
13. ವೈ.ಎಂ. ಸತೀಶ್
14. ಎಸ್.ವ್ಹಿ. ಸಂಕನೂರ
15. ಶಿವಕುಮಾರ್ ಕೆ.

ಮಧ್ಯಾಹ್ನ 3.40 ಗಂಟೆಗೆ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

16. ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
17. ಹೇಮಲತಾ ನಾಯಕ
18. ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
19. ಶಾಂತಾರಾಮ್ ಬುಡ್ನ ಸಿದ್ದಿ

ಮಾನ್ಯ ಗೃಹ ಸಚಿವರು ಸ್ಪಷ್ಟೀಕರಣ ನೀಡಿದರು.

**"ಗದ್ದಲ"**

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**4.** **"ಕರ್ನಾಟಕ ಅನುಸೂಚಿತ ಜಾತಿಗಳ (ಉಪ-ವರ್ಗೀಕರಣ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಮಾಜ ಕಲ್ಯಾಣ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಎಫ್.ಹೆಚ್. ಜಕ್ಕಪ್ಪನವರ್
2. ಹೆಚ್.ಪಿ. ಸುಧಾಮ್ ದಾಸ್
3. ಸಿ.ಟಿ. ರವಿ
4. ಡಾ: ತಳವಾರ್ ಸಾಬಣ್ಣ
5. ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

ಸಂಜೆ 6.18 ಗಂಟೆಯಲ್ಲಿ **ಶ್ರೀಮತಿ ಭಾರತಿ ಶೆಟ್ಟಿ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

6. ಶಿವಕುಮಾರ್ ಕೆ.

ಸಂಜೆ 6.37 ಗಂಟೆಗೆ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 4. ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಕುರಿತು ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ

ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಕುರಿತು ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಕೇಶವ ಪ್ರಸಾದ್ ಎಸ್
2. ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
3. ಪಿ.ಹೆಚ್. ಪೂಜಾರ್
4. ಎಸ್.ವ್ಹಿ. ಸಂಕನೂರ

ಸರ್ಕಾರದ ಉತ್ತರವನ್ನು ವಿರೋಧಿಸಿ ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಸಭಾತ್ಯಾಗ ಮಾಡಿದರು.

## ಶಾಸನ ರಚನೆ

### ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

**5.** ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಮಾಜ ಕಲ್ಯಾಣ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 5. ನಿರ್ಣಯಗಳು

**ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) ಅವರು ಮಂಡಿಸಿದ ಈ ಕೆಳಕಂಡ 7 ಅಧಿಕೃತ ನಿರ್ಣಯಗಳ ಮೇಲೆ ಚರ್ಚೆ ಹಾಗೂ ಅಂಗೀಕಾರ.**

1) ಕಲ್ಯಾಣ ಕರ್ನಾಟಕ ಪ್ರದೇಶದ ಬಹು ದಿನಗಳ ಬೇಡಿಕೆಯಾದ ರಾಯಚೂರು ಜಿಲ್ಲೆಯಲ್ಲಿ ತಕ್ಷಣವೇ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (AIIMS) ಅನ್ನು ಸ್ಥಾಪಿಸಲು ಭಾರತ ಸರ್ಕಾರಕ್ಕೆ ಆಗ್ರಹಿಸಲು ಮತ್ತು ಈ ಸಂಬಂಧದಲ್ಲಿ ಮುಖ್ಯಮಂತ್ರಿಯವರ ಪತ್ರಗಳು ಹಾಗೂ ನಿರಂತರ ಪ್ರಯತ್ನಗಳ ಪೂರಕವಾಗಿರುವ ನಿರ್ಣಯವನ್ನು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

2) ಕರ್ನಾಟಕದಲ್ಲಿ ಬೆಂಗಳೂರು–ಮೈಸೂರು ಪ್ರದೇಶದಲ್ಲಿ ಮಾತ್ರ ಕೇಂದ್ರಿಕೃತವಾಗಿರುವ 73 ರಾಷ್ಟ್ರೀಯ ಪ್ರಾಮುಖ್ಯತೆಯ ಕೇಂದ್ರ ಸರ್ಕಾರದ ಸಂಸ್ಥೆಗಳನ್ನು ಗುರುತಿಸಿ, ಅವುಗಳಲ್ಲಿ ಕನಿಷ್ಠ 25 ಪ್ರಮುಖ ಸಂಶೋಧನಾ ಸಂಸ್ಥೆಗಳು ಸೇರಿದಂತೆ, ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವರ್ಗಾಯಿಸಲು ಭಾರತ ಸರ್ಕಾರವನ್ನು ಆಗ್ರಹಿಸಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

3) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 (UKP-III)ನ್ನು ತಕ್ಷಣವೇ ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಲು, ಕೇಂದ್ರ ಅನುದಾನ ಬಿಡುಗಡೆ ಮಾಡಲು ಮತ್ತು ಕೃಷ್ಣಾ ಜಲವಿವಾದ ನ್ಯಾಯಾಧಿಕರಣ–2 (KWDT-II)ರ ಅಂತಿಮ ತೀರ್ಪಿನ ಗೆಜೆಟ್ ಅಧಿಸೂಚನೆಗೆ ಒತ್ತಾಯಿಸಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

4) ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಗೆ ರೂ.5000 ಕೋಟಿ ಹೊಂದಾಣಿಕೆ ಅನುದಾನವನ್ನು ವಿದರ್ಭ ಅಭಿವೃದ್ಧಿ ಮಾದರಿಯಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡುವಂತೆ ಆಗ್ರಹಿಸಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

5) ಕರ್ನಾಟಕದಲ್ಲಿ ಕಬ್ಬು ಮತ್ತು ಇತರೆ ಕಚ್ಚಾ ವಸ್ತುಗಳನ್ನು ಆಧರಿಸಿ ಉತ್ಪಾದಿಸುವ ಎಥೆನಾಲ್ ಸಾಮರ್ಥ್ಯಕ್ಕೆ ಅನುಗುಣವಾಗಿ ತಾರತಮ್ಯ ಮಾಡದೇ ಸಮಾನವಾದ ಎಥೆನಾಲ್ ಸಂಗ್ರಹಣೆ ಪ್ರಮಾಣವನ್ನು ನಿಗದಿಪಡಿಸಿ ರೈತರ ರಕ್ಷಣೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

6) ಮಹದಾಯಿ ನ್ಯಾಯಾಧಿಕರಣದ ತೀರ್ಪಿನನ್ವಯ ಕುಡಿಯುವ ನೀರು ಪೂರೈಕೆಯ ಮಹತ್ವಾಕಾಂಕ್ಷೆಯ ಕಳಸಾ–ಬಂಡೂರಿ ನಾಲಾ ತಿರುವು ಯೋಜನೆಗೆ ಅಗತ್ಯವಿರುವ ಅರಣ್ಯ ಮತ್ತು ವನ್ಯಜೀವಿ ಮಂಡಳಿಗಳ ಅನುಮೋದನೆಗಳನ್ನು ತ್ವರಿತವಾಗಿ ಒದಗಿಸಲು ಭಾರತ ಸರ್ಕಾರದ ತುರ್ತು ಕ್ರಮಕ್ಕಾಗಿ ಒತ್ತಾಯಿಸಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

7) ರಾಜ್ಯದ ಮೀಸಲಾತಿ ಅಧಿನಿಯಮಗಳನ್ನು ಭಾರತ ಸಂವಿಧಾನದ ಒಂಭತ್ತನೇ ಅನುಸೂಚಿಗೆ ($9^{th}$ Schedule) ಸೇರ್ಪಡೆಗೊಳಿಸುವಂತೆ ಕೇಂದ್ರ ಸರ್ಕಾರವನ್ನು ಈ ಸದನವು ಸರ್ವಾನುಮತದಿಂದ ಒತ್ತಾಯಿಸುತ್ತದೆ.

ನಿರ್ಣಯಗಳನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಮಾನ್ಯ ಸಭಾನಾಯಕರು ಪ್ರಶ್ನೆಗಳು, ಶೂನ್ಯವೇಳೆ ಪ್ರಸ್ತಾವ, ಗಮನ ಸೆಳೆಯುವ ಸೂಚನೆ ಹಾಗೂ ನಿಯಮ 330ರ ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಿದರು.

## 6.ಸಾರಾಂಶ

**ಮಾನ್ಯ ಸಭಾಪತಿಯವರು:–**

ವಿಧಾನ ಪರಿಷತ್ತಿನ 157ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:08.12.2025 ರಿಂದ 19.12.2025ರವರೆಗೆ ಒಟ್ಟು 10 ದಿನಗಳು ಅಂದರೆ, 62 ಗಂಟೆ 05 ನಿಮಿಷಗಳ ಕಾಲ ನಡೆಸಲಾಗಿರುತ್ತದೆ.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 11 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ಮಾನ್ಯ ಶಾಸಕರಾದ ಶ್ರೀ ಡಿ.ಎಸ್. ಅರುಣ್ ಅವರು ನೂತನವಾಗಿ ಶಿವಮೊಗ್ಗ ವಲಯ ಸಂಚಾಲಕರಾಗಿ ಮತ್ತು ಕನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ನಿರ್ದೇಶಕರಾಗಿ ಆಯ್ಕೆಯಾಗಿರುವುದಕ್ಕೆ ಹಾಗೂ ಗುಲಾಬಿ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾಗಿರುವ ಮಾನ್ಯ ಶಾಸಕರಾದ ಡಾ: ಉಮಾಶ್ರೀ ಅವರು ರಂಗಭೂಮಿ, ಚಲನಚಿತ್ರರಂಗ ಹಾಗೂ ರಾಜಕೀಯ ರಂಗದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ಡಾ: ರಾಜ್‌ಕುಮಾರ್ ಜೀವಮಾನ ಪ್ರಶಸ್ತಿಗೆ ಭಾಜನರಾಗಿರುವುದಕ್ಕೆ ಸದನವು ಅಭಿನಂದನೆಯನ್ನು ಸಲ್ಲಿಸಲಾಯಿತು.

2025–26ನೇ ಸಾಲಿನ ಪೂರಕ ಅಂದಾಜುಗಳು ಎರಡನೇ ಕಂತು, 2025–26ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿ, ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 1 ಮತ್ತು 2ನೇ ಪಟ್ಟಿಗಳನ್ನು ಮಂಡಿಸಲಾಯಿತು. ಭಾರತ ಸಂವಿಧಾನದ 151(2)ನೇ ಅನುಚ್ಛೇಧದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ "ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ (ಪಿಎಂಕೆಕೆಕೆವೈ) ಮೇಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್‌ಟಿ) ಒಳಗೊಂಡಂತೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್ ವರದಿ (2025ರ ವರದಿ ಸಂಖ್ಯೆ–7), ಕರ್ನಾಟಕದಲ್ಲಿ ವಿಪತ್ತು ನಿರ್ವಹಣಾ ಕಾರ್ಯನಿರ್ವಹಣೆ (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್) (2025ರ ವರದಿ ಸಂಖ್ಯೆ–8) ಹಾಗೂ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (ಐಪಿಡಿಎಸ್) ಅನುಷ್ಠಾನದ ಮೇಲಿನ (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ವಾಣಿಜ್ಯ) (2025ರ ವರದಿ ಸಂಖ್ಯೆ–9) ಮತ್ತು 2024–25ನೇ ಸಾಲಿನ ಧನವಿನಿಯೋಗ ಲೆಕ್ಕಗಳು (ಸಂಪುಟ–I) ಹಾಗೂ (ಸಂಪುಟ–II ಭಾಗ–1 ಮತ್ತು 2) ವರದಿಗಳನ್ನು ಮಂಡಿಸಲಾಯಿತು.

ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿಯ ಎರಡು ಅರ್ಜಿಗಳನ್ನು ಹಾಗೂ 2024–25ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಒಂದನೇ ವರದಿಯನ್ನು ಒಪ್ಪಿಸಲಾಯಿತು.

"ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ, ಪ್ರೌಢ ಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿ ಹೊಂದಿದ ಶಿಕ್ಷಕರುಗಳು ಹಾಗೂ 10, 15, 20, 25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ ಸೌಲಭ್ಯಗಳನ್ನು ಪಡೆದಿರುವ ಶಿಕ್ಷಕರುಗಳ ನಡುವಿನ ವೇತನ ತಾರತಮ್ಯವನ್ನು ಸರಿಪಡಿಸುವ ಕುರಿತು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಅವಧಿಯನ್ನು ದಿನಾಂಕ:02.12.2025ರಿಂದ ಆರು ತಿಂಗಳವರೆಗೆ ವಿಸ್ತರಿಸುವ ಹಾಗೂ ರಾಜ್ಯದಲ್ಲಿ 2020–21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು ದಿನಾಂಕ:14.07.2025ರಿಂದ ಹನ್ನೆರಡು ತಿಂಗಳವರೆಗೆ ವಿಸ್ತರಿಸುವ ಪ್ರಸ್ತಾವನೆಗಳನ್ನು ಮಂಡಿಸಿ ಅಂಗೀಕರಿಸಲಾಯಿತು.

ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) ಅವರು ಕೊಡಗು ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯವರ ವಿರುದ್ಧ ಮಂಡಿಸಿದ ಹಕ್ಕುಚ್ಯುತಿಯನ್ನು ಮಾನ್ಯ ಸಭಾಪತಿಯವರು ಹಕ್ಕುಬಾಧ್ಯತಾ ಸಮಿತಿಯ ಪರಿಶೀಲನೆಗೆ ವಹಿಸಿದರು.

ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಕುರಿತು 5 ಗಂಟೆ 48 ನಿಮಿಷಗಳ ಕಾಲ ವಿಶೇಷ ಚರ್ಚೆಯಾಗಿರುತ್ತದೆ.

ಏಳು ಅಧಿಕೃತ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಗಿರುತ್ತದೆ.

ನಿಯಮ 59 ರಡಿಯಲ್ಲಿ ಒಟ್ಟು 03 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಸದರಿ ಸೂಚನೆಯ ಪೈಕಿ ಒಂದು ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ ಚರ್ಚಿಸಲಾಯಿತು. ಒಂದು ಸೂಚನೆಯನ್ನು ನಿಯಮ 330ಕ್ಕೆ ಪರಿವರ್ತಿಸಲಾಯಿತು. ಉಳಿದಂತೆ 01 ಸೂಚನೆಯನ್ನು ತಿರಸ್ಕರಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1628 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಹಾಗೂ 1478 ಪ್ರಶ್ನೆಗಳನ್ನು ಚುಕ್ಕೆ ರಹಿತ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 144 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1478 ಪ್ರಶ್ನೆಗಳ ಪೈಕಿ 1148 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 06 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ.

ನಿಯಮ 72ರಡಿಯಲ್ಲಿ 165 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 18 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 74 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 108 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 10 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 34 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 102 ಸೂಚನೆಗಳ ಪೈಕಿ 04 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 45 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 07 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 16 ವಿಧೇಯಕಗಳು ಸೇರಿದಂತೆ ಒಟ್ಟು 23 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

**ಮಾನ್ಯ ಸಭಾನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರು ಮಾತನಾಡಿದ ನಂತರ:–**

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ಹಾಗೂ ಎಲ್ಲಾ ಶಾಸಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, ರಾತ್ರಿ 9.45 ಗಂಟೆಯಲ್ಲಿ ರಾಷ್ಟ್ರಗೀತೆಯನ್ನು ನುಡಿಸುವುದರ ಮೂಲಕ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದರು.**

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

*****